ಚಂಡಿಕಾ-ದರ್ಶನ

ಲೇಖಕ :

ವಿದ್ಯಾವಿಶಾರದ ವಿದ್ವಾನ್

ಬಿ. ಬಾಲಗಣಪತಿಭಟ್ಟ

ಶ್ರೀ ನಿರಂಜನ ಪ್ರಕಾಶನ.

ಶ್ರೀರಂಗಪಟ್ಟಣ

|| ಓಂ ಶ್ರೀ ಗಣೇಶಾಯ ನಮಃ ||

|| ಓಂ ಶ್ರೀ ಲಲಿತಾಂಬಿಕಾಯೈ ನಮಃ ||

ಶ್ರೀ ದುರ್ಗಾ ಸಪ್ತಶತೀ

ಪರಬ್ರಹ್ಮಸ್ವರೂಪಿಣಿಯಾದ ದೇವಿಯ ಮಹಾತ್ಮ್ಯವನ್ನು ತಿಳಿಸುವ ಗ್ರಂಥ "ಶ್ರೀ ದೇವೀ ಮಹಾತ್ಮ್ಯ" ಎಂದೇ ಪ್ರಸಿದ್ಧವಾಗಿದೆ. ಮಾರ್ಕಂಡೇಯ ಪುರಾಣದಲ್ಲಿ ಉಕ್ತವಾದ ಈ ಮಹಾತ್ಮ್ಯೆ ಹದಿಮೂರು ಅಧ್ಯಾಯಗಳಷ್ಟು ವಿಸ್ತೃತವಾಗಿದೆ. ಐದುನೂರ ಎಪ್ಪತ್ತೆಂಟು ಶ್ಲೋಕಗಳುಳ್ಳ ಈ ಭಾಗ "ಮಾರ್ಕಂಡೇಯ ಉವಾಚ" ಎಂದು ಆರಂಭಿಸಿ "ಸಾವರ್ಣಿರ್ಭವಿತಾಮನುಃ" ಎಂದು ಮುಕ್ತಾಯವಾಗುತ್ತದೆ. ಪ್ರಾರಂಭದ ಅಕ್ಷರ 'ಮ' ಕಾರವಿದ್ದು, ಅಂತ್ಯಾಕ್ಷರ 'ನು' ಕಾರದಿಂದ ಮುಕ್ತಾಯವಾಗುವುದು. ಒಟ್ಟಿನಲ್ಲಿ ಸಮಷ್ಟಿ ರೂಪದಿಂದ ಈ ಮಹಾತ್ಮ್ಯ 'ಮನು'. 'ಮನು' ಎಂಬ ಪದಕ್ಕೆ 'ಮಂತ್ರ' ಎಂದರ್ಥ.

ಕಾತ್ಯಾಯನೀತಂತ್ರ ಮೊದಲಾದವುಗಳಲ್ಲಿ ಈ ಗ್ರಂಥದಲ್ಲಿ 'ಏಳನೂರು' ಮಂತ್ರಗಳಿವೆ ಎಂದು ಹೇಳಲಾಗಿದೆ. ಆದುದರಿಂದ ಇದಕ್ಕೆ "ಸಪ್ತಶತೀ'' ಎಂಬ ಅನ್ವರ್ಥ ನಾಮವೂ ಇದೆ. ಮೇರು ತಂತ್ರದಲ್ಲಿ 'ಸಪ್ತಶತೀ' ಎಂಬ ನಾಮದೊಂದಿಗೆ 'ಸಪ್ತಸತಿ' ಎಂದೂ ಹೇಳಿ ಅದರ ವಿವರವನ್ನು ಈ ರೀತಿ ಕೊಡಲಾಗಿದೆ. ಶತ್ರುನಿಗ್ರಹ, ಬಂಧನಿವೃತ್ತಿ, ರೋಗಶಮನ ಇತ್ಯಾದಿ ನಾನಾವಿಧವಾದ ಫಲಗಳನ್ನು ಅಪೇಕ್ಷಿಸಿ, ಏಳನೂರು ವಿಧವಾದ ಪ್ರಯೋಗಗಳನ್ನು ಮಾಡಲು ಸಾಧ್ಯವಾದ ಮಹಾತ್ಮ್ಯವಾದುದರಿಂದ "ಸಪ್ತಸತೀ" ಎಂದು ಹೆಸರಿದೆ.

ಈ ದೇವೀ ಮಹಾತ್ಮ್ಯದಲ್ಲಿ ಪ್ರಥಮ, ಮಧ್ಯಮ, ಉತ್ತಮ ಎಂಬ ಮೂರು ಚರಿತ್ರೆಗಳಿವೆ. ಮಧುಕೈಟಭ ಸಂಹಾರದ ವಿವರಣೆಯುಳ್ಳ ಪ್ರಥಮ ಚರಿತ್ರೆಯಲ್ಲಿ "ಮಹಾ ವಿದ್ಯಾ, ಮಹಾಮಾಯಾ, ಮಹಾಮೇಧಾ, ಮಹಾಸ್ಮೃತಿ, ಮಹಾಮೋಹಾ, ಮಹಾದೇವೀ, ಮಹಾಸುರೀ ಎಂಬ 'ಏಳು' 'ಸತಿ'ಯರು ನಿರ್ದೇಶಿಸಲ್ಪಟ್ಟಿದ್ದಾರೆ. ಎರಡನೆಯದಾದ ಮಧ್ಯಮ

ಚರಿತ್ರದಲ್ಲಿ ಲಕ್ಷ್ಮೀ, ಲಲಿತಾ, ಕಾಳೀ, ದುರ್ಗಾ, ಗಾಯತ್ರೀ, ಅರುಂಧತೀ, ಸರಸ್ವತೀ, ಎಂಬ ಏಳು ಸತಿಯರೂ, ಅಂತೆಯೇ ಉತ್ತಮ ಚರಿತ್ರದಲ್ಲಿ ಬ್ರಾಹ್ಮೀ,ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಇಂದ್ರಾಣೀ, ಚಾಮುಂಡಾ ಎಂಬ ಸಪ್ತ ಸತಿಯರೂ ಉಕ್ತವಾಗಿದ್ದಾರೆ. ಈ ಚರಿತ್ರ ತ್ರಯಗರ್ಭಿತವಾದ ಇಪ್ಪತ್ತೊಂದು ಸತೀದೇವಿಯರ ಸಮಷ್ಟಿ ರೂಪವಾದ ನಂದಾ, ಶಾಕಾಂಭರೀ, ಶತಾಕ್ಷೀ, ಭೀಮಾ, ರಕ್ತದಂತಿಕಾ, ದುರ್ಗಾ, ಬ್ರಾಹ್ಮೀ ಎಂಬ ಏಳು ದೇವೀರೂಪಗಳ ಮಂತ್ರಗಳು ಪರೋಕ್ಷವಾಗಿ ಉತ್ತಮ ಚರಿತ್ರೆಯಲ್ಲಿ ಉಕ್ತವಾಗಿದೆ. ಹೀಗಾಗಿ ಸಪ್ತಸತೀ ಎಂಬುದೂ ಅನ್ವರ್ಥವೇ. ಇದರಂತೆ ಕಾಳಾ, ತಾರಾ, ಛಿನ್ನಮಸ್ತಾ, ಸುಮುಖೀ, ಭುವನೇಶ್ವರೀ, ಬಾಲಾ, ಕುಬ್ಜಾ ಎಂಬ ಸಪ್ತ ದೇವೀರೂಪಗಳ ಮಂತ್ರವು ಮಧ್ಯಮ ಚರಿತ್ರೆಯಲ್ಲಿ ಪರೋಕ್ಷವಾಗಿ ಉಕ್ತವಾಗಿದೆ.

ಪ್ರಥಮ ಚರಿತ್ರೆಯಲ್ಲಿ ಮಧುಕೈಟಭ ವಧೆ, ದ್ವಿತೀಯ ಅಥವಾ ಮಧ್ಯಮ ಚರಿತೆಯಲ್ಲಿ ಮಹಿಷಾಸುರ ಸಂಹಾರ, ತೃತೀಯ ಅಥವಾ ಅಂತಿಮ ಚರಿತ್ರೆಯಲ್ಲಿ ಶುಂಭನಿಶುಂಭ ವಧ ಇವುಗಳ ವರ್ಣನೆಯಿದೆ. ಇದಲ್ಲದೇ ಈ ರಾಕ್ಷಸ ರಾಜರಿಗೆ ಬೆಂಬಲವಾಗಿ ನಿಂತ ಧೂಮ್ರಲೋಚನ, ಚಂಡ ಮುಂಡರು, ರಕ್ತಬೀಜ ಮೊದಲಾದವರ ಸಂಹಾರದ ವಿವರವೂ ಈ ಗ್ರಂಥದಲ್ಲಿ ಸೇರಿದೆ.

ಲೋಕಕಂಟಕರಾದ ರಾಕ್ಷಸ ಸಂಹಾರವಾದೊಡನೆಯೇ, ಇದರಿಂದ ಸಂತೃಪ್ತರಾದ ದೇವತೆಗಳು, “ದುರ್ಗೆ”ಯನ್ನು ಸ್ತುತಿಸಿದ ಮೂರು ಸ್ತೋತ್ರಗಳೂ, ಚರಿತ್ರತ್ರಯದಲ್ಲಿ ಅಡಕವಾಗಿದೆ.

“ಸುರಥ” ಎಂಬ ರಾಜ, ಸಮಾಧಿ ಎಂಬ ವೈಶ್ಯ ಇವರು ಕ್ರಮವಾಗಿ ದೇಶಭ್ರಷ್ಟ ಹಾಗೂ ಗೃಹ ಭ್ರಷ್ಟರಾಗಿ ಕಾಡು ಸೇರಿ, “ಸುಮೇಧ” ಎಂಬ ಋಷಿಯನ್ನು ಆಶ್ರಯಿಸಿ, ಆತನಿಂದ ಈ ದೇವಿಯ ಮಹಾತ್ಮ್ಯೆಯನ್ನು ಪ್ರತ್ಯಕ್ಷವಾಗಿ ಕೇಳುವ ಸೌಭಾಗ್ಯವನ್ನು ಪಡೆದರು.

ಮಾರ್ಕಂಡೇಯ ಪುರಾಣದಲ್ಲಿನ ಈ ಮಹಾತ್ಮ್ಯೆ, ಮಾರ್ಕಂಡೇಯ ಮುನಿಯಿಂದ "ಕ್ರೋಷ್ಟುಕಿ" ಎಂಬುವನಿಗೆ ಹೇಳಲ್ಪಟ್ಟಿದೆ.

"ಮನನಾತ್ ತ್ರಾಯತ ಇತಿ ಮಂತ್ರ" ಎಂಬ ವ್ಯುತ್ಪತ್ತಿಯಂತೆ ಈ ಏಳು ನೂರು ಮಂತ್ರಗಳ ಮೂಲಕ ದೇವಿಯ ಉಪಾಸನೆಯು ಸಾಮಾನ್ಯವಾಗಿ ಮನುಷ್ಯನು ಅಪೇಕ್ಷಿಸುವ ಐಹಿಕ ಹಾಗೂ ಪಾರಲೌಕಿಕವೆಂಬ ಸುಖದ್ವಯ ವನ್ನು ಕರುಣಿಸುವುದು. "ಆರಾಧಿತಾ ಸೈವ ನೃಣಾಂ ಭೋಗ ಸ್ವರ್ಗಾಪ ವರ್ಗದಾ".

ಸುರಥರಾಜನು, ದೇವಿಯ ಉಪಾಸನಾಫಲವಾಗಿ, ತನ್ನ ರಾಜ್ಯ ಸಂಪತ್ತನ್ನು ಪಡೆದು ಸುಖಸಾಮ್ರಾಜ್ಯದಲ್ಲಿ ತೇಲಲು ಆರಂಭಿಸಿದ. ಸಮಾಧಿಯೂ ಇದೇ ಉಪಾಸನಾ ಫಲವಾಗಿ ಮೋಕ್ಷ ಸಾಮ್ರಾಜ್ಯವನ್ನು ಪಡೆದನು.

ಈ ಸಪ್ತಶತೀ ಮಹಾ ಮಂತ್ರದ ಪಠನದಲ್ಲಿ ಕೆಲವು ವಿಶೇಷ ನಿಯಮ ಗಳನ್ನು ವಿಧಿಸಲಾಗಿದೆ. ಆರಂಭದಲ್ಲಿ ಮಾಡಬೇಕಾದ ಕೆಲವು ಕರ್ಮಗಳನ್ನು "ಪೂರ್ವಾಂಗವೆಂದೂ ಪಠನಾನಂತರ ಮಾಡಬೇಕಾದ ಕೆಲವು ವಿಧಿಗಳು "ಉತ್ತರಾಂಗ" ವೆಂದೂ ಪ್ರಸಿದ್ಧವಾಗಿವೆ. ಕವಚ, ಅರ್ಗಳಾ, ಕೀಲಕ, ರಾತ್ರೀಸೂಕ್ತ, ನವಾಕ್ಷರೀ, ಅಂಗನ್ಯಾಸ–ಕರನ್ಯಾಸ ಇವು ಪೂರ್ವಾಂಗ. ಹೃದಯಾದಿ ವಿನ್ಯಾಸ, ನವಾಕ್ಷರೀ, ದೇವೀಸೂಕ್ತ, ರಹಸ್ಯತ್ರಯ, ಜಪ ನಿವೇದನ, ಇವು ಉತ್ತರಾಂಗಗಳು. ತಂತ್ರಭೇದದಿಂದ ಈ ಪೂರ್ವಾಂಗ ಉತ್ತ ರಾಂಗಗಳು ವ್ಯತ್ಯಸ್ತವಾಗಿವೆ.

ಒಂದೇ ದಿನದಲ್ಲಿ ಹದಿಮೂರು ಅಧ್ಯಾಯಗಳನ್ನು ಪಾರಾಯಣ ಮಾಡಲು ಅಸಾಧ್ಯವಾದಲ್ಲಿ "ಏಕೇನ ವಾ ಮಧ್ಯಮೇನ ನೈಕೇನೇತ್ತರ ಯೋರಿಹ" ಎಂಬ ವಾಕ್ಯದಂತೆ ಮಧ್ಯಮ ಚರಿತ್ರವನ್ನು ಮಾತ್ರ ಪಠಿಸ ಬಹುದು.

ಸಪ್ತಾಹ ಪಾರಾಯಣ ಕ್ರಮವೀರೀತಿಯಾಗಿದೆ. ಪ್ರಥಮ ದಿವಸ, ಪ್ರಥಮಾಧ್ಯಾಯ, ದ್ವಿತೀಯ ದಿನ ದ್ವಿತೀಯ–ತೃತೀಯ ಅಧ್ಯಾಯಗಳು,

ತೃತೀಯದಿನ ಚತುರ್ಥಾಧ್ಯಾಯ, ಚತುರ್ಥದಿನ ಪಂಚಮಾಧ್ಯಾಯದಿಂದ ಅಷ್ಟಮಾಧ್ಯಾಯವೂ ಸೇರಿದಂತೆ ನಾಲ್ಕು ಅಧ್ಯಾಯಗಳು, ಪಂಚಮ ದಿನ ನವಮದಶಮಾಧ್ಯಾಯಗಳು, ಷಷ್ಠ ದಿನ ಏಕದಶಾಧ್ಯಾಯ, ಸಪ್ತಮಿ ದಿನ ಉಳಿದ ಎರಡು ಅಧ್ಯಾಯಗಳು ಪಾರಾಯಣ ಮಾಡತಕ್ಕದ್ದು.

ಈ ಪವಿತ್ರವಾದ ಗ್ರಂಥದ ಪೂರ್ಣ ಪಾರಾಯಣದಲ್ಲಿ ಒಟ್ಟು ಒಂಭತ್ತು ವಿಧಾನಗಳಿವೆ. ಮೂರು ಚರಿತ್ರೆಗಳನ್ನು (ಮಹಾಕಾಳೀ, ಮಹಾಲಕ್ಷ್ಮೀ, ಮಹಾಸರಸ್ವತೀ) ಕ್ರಮವಾಗಿ ಪಠಿಸುವುದು "ಮಹಾವಿದ್ಯಾ" ಎಂದೆನಿಸಿಕೊಂಡಿದೆ. ಎರಡನೆಯ ವಿಧಾನ "ಮಹಾತಂತ್ರ". ಪ್ರಥಮ, ತೃತೀಯ, ದ್ವಿತೀಯ ಚರಿತ್ರೆಗಳ ಪಠಣಕ್ರಮ ಈ ವಿಧಾನಕ್ಕೆ ಸಂಬಂಧಿಸಿದೆ. ದ್ವಿತೀಯ, ಪ್ರಥಮ, ತೃತೀಯ ಚರಿತ್ರೆಗಳ ಪಠಣಕ್ಕೆ "ಸಪ್ತಶತೀ" ಕ್ರಮವೆಂದು ಹೆಸರು. ತೃತೀಯ, ಪ್ರಥಮ, ದ್ವಿತೀಯ ಚರಿತ್ರ ಪಠನ "ಮೃತ ಸಂಜೀವಿನೀ" "ಮಹಾಚಂಡೀ"ಎಂಬುದು ಐದನೆಯ ವಿಧಾನ. ತೃತೀಯ, ದ್ವಿತೀಯ, ಪ್ರಥಮ ಚರಿತ್ರ ಪಾರಾಯಣ ಈ ಐದನೆಯ ವಿಧಾನಕ್ಕೆ ಸಂಬಂಧಿಸಿದೆ. ಚಂಡಿಕಾ ಮಂತ್ರ ಸಂಪುಟೀಕರಣದೊಂದಿಗೆ, ಪ್ರಥಮ, ದ್ವಿತೀಯ, ತೃತೀಯ ಚರಿತ್ರೆಗಳ ಪಾರಾಯಣ "ಚಂಡೀ ಪಾಠ ಕ್ರಮ" ಎಂದು ಕರೆಯಿಸಿಕೊಳ್ಳುತ್ತದೆ. ಇದು ಆರನೆಯ ವಿಧಾನ ಇದೇ ರೀತಿಯಾಗಿ, ರೂಪಂದೇಹಿ ಜಯಂದೇಹಿ, ಯಶೋದೇಹಿ ದ್ವಿಷೋಜಹಿ" ಎಂಬ ಶ್ಲೋಕವನ್ನು ನವಾಕ್ಷರೀ ಮಹಾ ಮಂತ್ರ ಇವುಗಳ ಸಂಪುಟೀಕರಣದಿಂದ ಮಾಡುವ ಪಾರಾಯಣ "ರೂಪಚಂಡೀ" ಎಂದೂ, ಚತುಷ್ಷಷ್ಟಿ ಯೋಗಿನೀ ಮಂತ್ರಗಳ ಸಂಪುಟೀಕರಣದ ಪಾರಾಯಣ "ಯೋಗಿನೀ" ಎಂದೂ ಸೌಃ (ಪರಾಬೀಜ) ಎಂಬ ಬೀಜಾಕ್ಷರದ ಸಂಪುಟೀಕರಣ ಪಾರಾಯಣ "ಪರಾಚಂಡೀ" ಎಂದೂ ಪ್ರಸಿದ್ಧವಾಗಿದೆ. ಸಪ್ತಶತಿಯ ಏಳು ನೂರು ಮಂತ್ರಗಳನ್ನೂ ವಿಪರೀತಿ ಕ್ರಮದಿಂದ, (ಕೊನೆಯಿಂದ ಆರಂಭಿಸುವುದು) ಪಾರಾಯಣ ಮಾಡುವುದು ಒಂಭತ್ತನೆಯ ವಿಧಿ. ಇದಕ್ಕೆ, "ವಿಪರೀತ ಕ್ರಮ" ಎಂದು ಹೆಸರು.

ಇವುಗಳಲ್ಲಿ ಮಹಾವಿದ್ಯಾ ಪಾಠಕ್ರಮ, ಮೃತ್ಯು ಸಂಜೀವಿನೀ ಪಾಠಕ್ರಮ, ಕಟ್ಟಕಡೆಯ "ವಿಪರೀತ ಪಾಠಕ್ರಮ" ಇವುಗಳು ಕ್ರಮವಾಗಿ, ಸೃಷ್ಟಿ, ಸ್ಥಿತಿ, ಸಂಹಾರ ಪಾಠಕ್ರಮವೆಂದು ವ್ಯವಹರಿಸಲ್ಪಟ್ಟಿವೆ. ಸಂಪತ್ತು,

ಸಂತಾನ ಫಲಾಪೇಕ್ಷಿಗಳು ಪ್ರಥಮದ ಸೃಷ್ಟಿಕ್ರಮವನ್ನೂ ಸಕಲ ಭೋಗಾಪೇಕ್ಷಿಗಳು ದ್ವಿತೀಯಭೇದವಾದ ಸ್ಥಿತಿಕ್ರಮವನ್ನೂ ಮೋಕ್ಷಾಪೇಕ್ಷಿಗಳು ತೃತೀಯ ಭೇದವಾದ ಸಂಹಾರ ಕ್ರಮವನ್ನೂ ಅನುಸರಿಸಿ ಪಾಠಮಾಡಬೇಕೆಂಬ ವಿಧಿ ಇದೆ.

ಆದಿ-ಅಂತ್ಯಗಳಲ್ಲಿ ಇಷ್ಟವಾದ ಮಂತ್ರವನ್ನೋ, ಬೀಜಾಕ್ಷರವನ್ನೋ ಸೇರಿಸುವುದು ಸಂಪುಟೀಕರಣ" ವೆಂದೂ, ಆದಿಯಲ್ಲಿ ಸೇರಿಸುವುದು "ಪಲ್ಲವ" ವೆಂದೂ, ಅಂತ್ಯದಲ್ಲಿ ಮಾತ್ರ ಸೇರಿಸುವುದು "ಸಂಯೋಜನ" ವೆಂದೂ ಮಂತ್ರ ಶಾಸ್ತ್ರ ತಿಳಿಸಿದೆ.

ದುರ್ಗಾ ಸಪ್ತಶತಿಯಲ್ಲಿ ಉಕ್ತವಾದ ಏಳನೂರು ಮಂತ್ರಗಳಿಂದ ಭಗವತಿಯ ಪ್ರೀತ್ಯರ್ಥವಾಗಿ ಹೋಮವನ್ನೂ ಮಾಡಲಾಗುವುದು, "ನವಚಂಡೀ, ಶತಚಂಡೀ, ಸಹಸ್ರ ಚಂಡೀ" ಎಂಬ ಮೂರು ಬಗೆಯ ಹೋಮಗಳು ಪ್ರಸಿದ್ಧವಾಗಿದೆ. ನಂದಾ, ರಕ್ತದಂತಿಕಾ, ಶಾಕಂಭರೀ, ದುರ್ಗಾ, ಭೀಮಾ, ಭ್ರಾಮರೀ, ಕಾಳಿಕಾ, ಶಿವದೂತೀ, ಪ್ರಜಾಪತಿ" ಎಂಬ ನವ ದೇವತೆಗಳು ಪ್ರಧಾನವಾಗಿಯುಳ್ಳ ಹೋಮ "ನವಚಂಡೀ" ಶತ ಚಂಡಿಕಾ ಹೋಮದಲ್ಲಿ ಪ್ರತಿಯೊಂದು ಅಧ್ಯಾಯ ಸಮಾಪ್ತಿಯಲ್ಲೂ, ಪ್ರತ್ಯೇಕವಾದ ದ್ರವ್ಯವನ್ನು, ದೇವತಾಭೇದದಿಂದ ಮಾಡಲಾಗುವುದು.

ಅಧ್ಯಾಯ	ದೇವತೆ	ಹೋಮ ದ್ರವ್ಯ
ಪ್ರಥಮ	ವಾಗ್ಭವ ಬೀಜಾಧಿಷ್ಠಾತ್ರೀ ಮಹಾಕಾಳೀ	ಬಾಳೆಹಣ್ಣು
ದ್ವಿತೀಯ	ವಾಗ್ಭವ ಬೀಜಾಧಿಷ್ಠಾತ್ರೀ ಮಹಾಲಕ್ಷ್ಮೀ	ತೆಂಗಿನಕಾಯಿ
ತೃತೀಯ	ಅಷ್ಟಾವಿಂಶತಿವರ್ಣಾತ್ಮಿಕಾ ಮಹಾಲಕ್ಷ್ಮೀ	ಮಧುಪುಷ್ಪ (ಬಿಂದಿಗೆ ಹೂ)
ಚತುರ್ಥ	ತ್ರಿವರ್ಣಾತ್ಮಿಕಾ ಶಕ್ತಿಲಕ್ಷ್ಮೀ	ಅಡಿಕೆಕಾಯಿ

ಪಂಚಮ	ವಿಷ್ಣು ಮಾಯಾ ಚೇತನಾ, ಬುದ್ಧಿದೇವೀ, ನಿದ್ರಾದೇವೀ, ಕ್ಷುಧಾದೇವೀ ಛಾಯಾದೇವಿ, ಶಕ್ತಿದೇವಿ, ಶಾಂತಿದೇವಿ, ಜಾತಿದೇವೀ, ಲಜ್ಜಾದೇವೀ, ಕ್ಷಾಂತಿದೇವಿ, ಶ್ರದ್ಧಾದೇವಿ, ಕಾಂತಿದೇವೀ, ಲಕ್ಷ್ಮೀದೇವೀ, ವೃತ್ತಿದೇವೀ, ದಯಾದೇವಿ, ತುಷ್ಟಿದೇವೀ, ಮಾತೃದೇವೀ, ಭ್ರಾಂತಿ ದೇವೀ, ವ್ಯಾಪ್ತಿದೇವೀ, ಚಿತಿದೇವೀ,	ಬೀಜಾಕ್ಷರ (ದಾಳಿಂಬೆ, ಸೀಬೆ)
ಷಷ್ಠ	ಶತಾಕ್ಷೀ, ಧೂಮ್ರಾಕ್ಷೀ	ಕಿತ್ತಳೆ (ನಾರಂಗ)
ಸಪ್ತಮ	ಕರ್ಪೂರ ಬೀಜಾಧಿಷ್ಠಾತ್ರೀ, ಕಾಳೀ, ಚಾಮುಂಡಾ	ಕುಂಬಳಕಾಯಿ ತುಂಡು
ಅಷ್ಟಮ	ಅಷ್ಟಮಾತೃ ಸಹಿತ ರಕ್ತಾಕ್ಷೀ	ಕುಂಬಳಕಾಯಿ ತುಂಡು
ನವಮ	ವಾಗ್ಭವ ಬೀಜಾಧಿಷ್ಠಾತ್ರೀ ಮಹಾಕಾಳೀ	ಕುಂಬಳಕಾಯಿ ತುಂಡು ಅಥವಾ ಕಬ್ಬಿನ ತುಂಡು
ದಶಮ	ಸಿಂಹವಾಹನಾ ತ್ರಿಶೂಲಧಾರಿಣೀ	ಮಾದಳ ಹಣ್ಣು
ಏಕಾದಶ	ಸರ್ವ ನಾರಾಯಣೀ	ದಾಳಿಂಬ
ದ್ವಾದಶ	ಬಾಲಾ ತ್ರಿಪುರಸುಂದರೀ	ಬಿಲ್ವಫಲ
ತ್ರಯೋದಶ	ತ್ರಿಪುರಸುಂದರೀ ಶ್ರೀ ವಿದ್ಯಾ	ಬಾಳೇಹಣ್ಣು

ಸ್ವಾಹಾಂತವಾಗಿ ಹೋಮ ಮಾಡುವ ಮಂತ್ರಗಳ ಏಳನೂರು ಸಂಖ್ಯೆಯಲ್ಲಿ ಪೂರ್ಣ ಶ್ಲೋಕಗಳು, ಅರ್ಧ ಶ್ಲೋಕಗಳು ಮಾತ್ರವಲ್ಲದೇ, ದೇವೀ ಉವಾಚ, ಋಷಿರುವಾಚ ಇವುಗಳೂ ಸೇರಿಕೊಂಡಿವೆ. ತಂತ್ರ ಭೇದದಿಂದ ಶ್ಲೋಕ ಅರ್ಧ ಶ್ಲೋಕಗಳ ವಿಭಾಗ ಕ್ರಮದಲ್ಲಿ ವ್ಯತ್ಯಾಸವಿದ್ದರೂ, ಸಮಷ್ಟಿಯಲ್ಲಿ ಏಳುನೂರು ಮಂತ್ರಗಳು ಎಂಬುದು ಎಲ್ಲ ತಂತ್ರಕಾರರಿಗೂ ಸಮ್ಮತವಾದದ್ದು.

ಏಳನೂರು ಮಂತ್ರಗಳಲ್ಲಿ ಪ್ರತಿಯೊಂದಕ್ಕೂ ಪ್ರತ್ಯೇಕವಾದ ಋಷಿ ದೇವತಾ, ಛಂದಸ್ಸನ್ನು ಕಾತ್ಯಾಯನೀ ತಂತ್ರದಲ್ಲಿ ನಿರ್ದೇಶಿಸಲಾಗಿದೆ.

ಸಪ್ತಶತೀ ಮಂತ್ರದಲ್ಲಿ ಉಕ್ತವಾದ ಪ್ರಧಾನ ದೇವತೆ "ದುರ್ಗಾ" ಸಂಖ್ಯೆ ಒಂಬತ್ತು. ಶೈಲಪುತ್ರೀ, ಬ್ರಹ್ಮಚಾರಿಣೀ, ಚಂದ್ರಖಂಡಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯನೀ, ಕಾಳರಾತ್ರೀ, ಮಹಾಗೌರೀ, ಸಿದ್ಧಿದಾತ್ರೀ ಎಂಬ ನವದುರ್ಗೆಯರು ಕವಚಸ್ತೋತ್ರದಲ್ಲಿ ಉಕ್ತವಾಗಿದ್ದಾರೆ. ದುರ್ಗೋಪಾಸನಾಕಲ್ಪದಲ್ಲಿ ಜಯಾ, ವಿಜಯಾ, ಭದ್ರಾ, ಭದ್ರಕಾಳೀ, ಸುಮುಖೀ, ದುರ್ಮುಖೀ, ಪ್ರಜ್ಞಾ, ವ್ಯಾಘ್ರಮುಖೀ, ಸಿಂಹಮುಖೀ ಎಂಬ ನವದುರ್ಗೆಯರು ಉಕ್ತವಾಗಿದ್ದಾರೆ. ಆಗಮಗಳಲ್ಲಿ ಈ ನವದುರ್ಗೆಯರ ಹೆಸರುಗಳು ಇಂತಿವೆ. "ವನದುರ್ಗಾ, ಜಲದುರ್ಗಾ, ವಹ್ನಿದುರ್ಗಾ, ಸ್ಥೂಲದುರ್ಗಾ, ವಿಷ್ಣುದುರ್ಗಾ, ಬ್ರಹ್ಮದುರ್ಗಾ, ರುದ್ರದುರ್ಗಾ, ಮಹಾ ದುರ್ಗಾ, ಶೂಲಿನೀದುರ್ಗಾ".

ಈ ನವದುರ್ಗೆಯರ, ಉಪಾಸನಾಕ್ರಮದಿಂದ ವಿವರಣೆಯನ್ನು ಶಾರದಾತಿಲಕ, ಮಂತ್ರಮಹಾರ್ಣವ, ಮಂತ್ರಮಹೋದಧಿ ಮೊದಲಾದ ಗ್ರಂಥಗಳಿಂದ ಪಡೆಯಬಹುದು. ಇನ್ನು ಮುಂದೆ ಪೂರ್ವಾಂಗ, ಉತ್ತರಾಂಗ ಗಳ ಸೂಕ್ಷ್ಮ ಪರಿಚಯ "ಕವಚ" ವನ್ನು ಕೊಡಲಾಗುತ್ತದೆ.

ಕವಚ : ಯುದ್ಧದಲ್ಲಿ ಹೋರಾಡುವ ಯೋಧನು ಧರಿಸಿದ, "ಕವಚ"ವು ಶತ್ರುಗಳಿಂದ ಪ್ರಯೋಗಿಸಲ್ಪಟ್ಟ ಶಸ್ತ್ರಗಳಿಂದ ಸಂರಕ್ಷಿಸುವಂತೆ, ಸಪ್ತಶತೀಯ ಪೂರ್ವಾಂಗವಾದ ಕವಚ ಪಾಠವು, ಪಾಠಕನಿಗೆ ಒದಗಬಹುದಾದ ದುಷ್ಟಶಕ್ತಿ ಅಭಿಚಾರಿಕ ಪ್ರಯೋಗಗಳಿಂದ ಸಂರಕ್ಷಿಸುವುದು. ಈ ಕವಚ ಸ್ತೋತ್ರದಲ್ಲಿ ಶರೀರ, ಪ್ರಾಣ, ಪರಿವಾರ ಇವುಗಳನ್ನು ಸಂರಕ್ಷಿಸುವಂತೆ ಪ್ರಾರ್ಥಿಸಲಾಗುವುದು.

"ಅರ್ಗಳಾ" 'ಅರ್ಗಳಾ' ಎಂದರೆ 'ಅಗಳಿ' ಕದ) ಎಂದರ್ಥ. ಅರ್ಗಳಾ ಹೃದಯೇ ಯಸ್ಯ ತಥಾನರ್ಗಲವಾನಸೌ" ಎಂಬಂತೆ, ಈ ಸ್ತೋತ್ರ ದಿಂದ, ಪಾಪಾದಿಗಳು ಶರೀರವನ್ನು ಪ್ರವೇಶಿಸದಂತೆ ಪ್ರತಿಬಂಧಕವುಂಟಾ ಗುವುದು.

ಕೀಲಕ : "ಸರ್ವಮೇತದ್ವಿಜಾನೀಯಾನ್ಮಂತ್ರಾಣಾಮಭಿಕೀಲಕಂ" ಸೋಪಿಕ್ಷೇಮಮವಾಪ್ನೋತಿ ಸತತಂ ಜಾಪ್ಯತತ್ಪರಃ ಎಂಬಂತೆ. ಈ ಕೀಲಕದ ಪಠನ ಸಕಲ ವಿಧವಾದ ಕ್ಷೇಮವನ್ನುಂಟುಮಾಡುವುದು. ಕೀಲಕ ಎಂದರೆ "ಬಾಗಿಲಕೊಂಡಿ" ಎಂದರ್ಥ. ಮಂತ್ರ ಸಿದ್ಧಿಗೆ ಒದಗಬಹುದಾದ ವಿಘ್ನವನ್ನು ಪ್ರತಿಬಂಧಿಸುವುದರಿಂದ ಈ 'ಕೀಲಕ' ಎಂಬ ಶಬ್ದ ಅನ್ವರ್ಥ.

ರಾತ್ರಿಸೂಕ್ತ : ನಾಲ್ಕನೆಯ ಪೂರ್ವಾಂಗ 'ರಾತ್ರಿಸೂಕ್ತ' ಪಠನ. ಈ ರಾತ್ರಿಸೂಕ್ತವು ಋಗ್ವೇದದಲ್ಲಿ "ರಾತ್ರಿವ್ಯಖ್ಯತ್" ಎಂದು ಆರಂಭವಾಗುವುದು. "ರಾತ್ರಿಂ ಪ್ರಪದ್ಯೇ" ಎಂದು ಆರಂಭವಾಗುವ ರಾತ್ರಿ ಸೂಕ್ತ ಸಾಮವೇದದಲ್ಲಿ ಪ್ರಸಿದ್ಧವಾಗಿದೆ. ದುರ್ಗಾ ಸಪ್ತಶತೀಯಲ್ಲಿನ ಮೊದಲನೆಯ ಅಧ್ಯಾಯದ ವಿಶ್ವೇಶ್ವರೀಂ ಪ್ರಪದ್ಯೇ ಎಂದು ಆರಂಭವಾಗಿ "ಮಹಾಸುರೌ" ಎಂಬುದರಿಂದ ಮುಕ್ತಾಯವಾಗುವ ಬ್ರಹ್ಮಕೃತ ಸ್ತುತಿಯನ್ನೂ "ತಾಂತ್ರಿಕ ರಾತ್ರಿಸೂಕ್ತ" ಎಂದು ಕರೆಯಲಾಗಿದೆ.

ಜಗತ್ತಿನ ಸಮಸ್ತ ವ್ಯಾಪಾರವೂ ಮರೆಯಾಗುವ ಕಾಲ "ರಾತ್ರಿ" ಇದು "ಜೀವರಾತ್ರಿ". ಸಕಲ ಪ್ರಪಂಚವೂ ಲಯವಾಗಿರುವ ಈ ಕಾಲದ ಅಧಿದೇವತೆಯನ್ನು ಈ ಸೂಕ್ತಗಳಲ್ಲಿ ಸ್ತುತಿಸಲಾಗಿದೆ.

ನವಾಕ್ಷರೀ : ಐಂ, ಹ್ರೀಂ, ಕ್ಲೀಂ, ಚಾಮುಂಡಾಯೈ ವಿಚ್ಚೇ ಎಂಬುದೇ ನವಾಕ್ಷರ ಮಂತ್ರ. ಮೊದಲನೆಯದಾದ 'ಐಂಕಾರವೆಂಬುದು ವಾಗ್ಭವಬೀಜ. ಇದು ಚಿದ್ರೂಪಿಯಾದ ಸರಸ್ವತಿಯನ್ನು ನಿರ್ದೇಶಿಸುತ್ತದೆ. ಎರಡನೆಯದು ಮಾಯಾಬೀಜಾಕ್ಷರ. ಇದು ಸದ್ರೂಪಿಣಿಯಾದ ಮಹಾಲಕ್ಷ್ಮಿಯನ್ನು ನಿರ್ದೇಶಿಸುತ್ತದೆ. ಆನಂದ ರೂಪಿಣಿಯಾದ ಮಹಾಕಾಳಿಯನ್ನು ನಿರ್ದೇಶಿಸುವುದು ಕಾಮ ಬೀಜಾಕ್ಷರವಾದ "ಕ್ಲೀಂ" ಕಾರ. 'ಚಾಮುಂಡಾ' ಎಂಬ ಶಬ್ದ ಮೋಕ್ಷ ಸಾಧನವಾದ ನಿರ್ವಿಕಲ್ಪಜ್ಞಾನವಾಚಕ. ಒಟ್ಟಿನಲ್ಲಿ "ಸಚ್ಚಿದಾನಂದ ರೂಪಿಣಿಯರಾದ ಮಹಾ ಸರಸ್ವತಿ, ಮಹಾ ಲಕ್ಷ್ಮಿ, ಮಹಾಕಾಳಿಯರೇ ; ಜ್ಞಾನ ಸಾಧನೆಗಾಗಿ ನಿಮ್ಮನ್ನು ಹೃದಯದಲ್ಲಿ ಧ್ಯಾನಿಸುತ್ತೇನೆ : ಎಂಬುದೇ ಈ ನವಾಕ್ಷರಿಯ ಅರ್ಥ.

ನ್ಯಾಸ : 'ನ್ಯಾಸ' ಎಂದರೆ ಇಡುವುದು ಎಂದರ್ಥ. ದೇವತಾ ಸ್ವರೂಪವನ್ನೋ, ಮಂತ್ರ ಸ್ವರೂಪವನ್ನೋ, ದೇಹದ ಅಂಗಾಂಗಳಲ್ಲಿ

ನೆಲಸುವಂತೆ ಮಾಡುವುದೇ "ನ್ಯಾಸ" ಎಂದು ಕರೆಯಲ್ಪಡುತ್ತದೆ. ಸಪ್ತಶತೀಗೆ ಮಾತೃಕಾದಿ ಹನ್ನೊಂದು ನ್ಯಾಸಗಳಿದ್ದರೂ, ಇದರಲ್ಲಿ ಖಡ್ಗನ್ಯಾದಿ ನ್ಯಾಸವೇ ಅತ್ಯಂತ ಪ್ರಸಿದ್ಧವಾಗಿ ಪ್ರಚಾರದಲ್ಲಿದೆ.

ದೇವೀ ಸೂಕ್ತ : "ಅಹಂ ರುದ್ರೇಭಿ" ಎಂದು ಆರಂಭವಾಗುವ ಎಂಟು ಋಕ್ಕುಗಳ ಋಗ್ವೇದೀಯ ಸೂಕ್ತವೇ "ದೇವೀಸೂಕ್ತ". ನಮೋ ದೇವ್ಯೈ ಎಂಬುದರಿಂದ ಆರಂಭವಾಗಿ "ವರಾರ್ತಿಭಿ" ಎಂದು ಮುಕ್ತಾಯವಾಗುವ ಸಪ್ತಶತಿಯ ಶ್ಲೋಕಗಳು ತಾಂತ್ರಿಕ ಸೂಕ್ತ. ರುದ್ರಯಾಮಳದಲ್ಲಿ, ಮಹಾಕಾಳೀ, ಮಹಾಲಕ್ಷ್ಮಿ, ಮಹಾಸರಸ್ವತಿಯರಿಗೆ ಪ್ರತ್ಯೇಕವಾದ ಸೂಕ್ತಗಳು ಉಕ್ತವಾಗಿವೆ.

ಸಪ್ತಶತೀ ಪಾರಾಯಣದ ಉತ್ತರಾಂಗವಾಗಿ ರಹಸ್ಯತ್ರಯಗಳ ಪಠನ ಅವಶ್ಯ. ಪ್ರಾಧಾನಿಕರಹಸ್ಯ, ವೈಕೃತಿಕರಹಸ್ಯ, ಮೂರ್ತಿರಹಸ್ಯ ಎಂಬುವೇ ಆ ರಹಸ್ಯತ್ರಯಗಳು.

ಪ್ರಾಧಾನಿಕ ರಹಸ್ಯ : ಪ್ರಾಧಾನಿಕ ರಹಸ್ಯದಲ್ಲಿ ದೇವಿಯ ಪ್ರಧಾನ ಪ್ರಕೃತಿಯನ್ನೂ ಸ್ವರೂಪವನ್ನೂ ವಿವರಿಸಲಾಗಿದೆ.

ತ್ರಿಗುಣಮಯಿಯಾದ ಮಹಾಲಕ್ಷ್ಮಿ ಸರ್ವಕಾರಣಳು, ಹಾಗೂ ದೃಶ್ಯಾದೃಶ್ಯರೂಪಗಳಿಂದ ಸಮಸ್ತ ಜಗದ್ವ್ಯಾಪಿನಿ. ಸುವರ್ಣಕಾಂತಿಯಿಂದ ಮೆರೆಯುವ ಈಕೆ ಚತುರ್ಭುಜಳು; ಒಮ್ಮೆ ಜಗತ್ತೆಲ್ಲವೂ ಶೂನ್ಯವಾದಾಗ ಈಕೆ ತಮೋಗುಣದ ಉಪಾಧಿಯಿಂದ ಇನ್ನೊಂದು ಉತ್ಕೃಷ್ಟವಾದ ರೂಪವನ್ನು ಧರಿಸಿದಳು. ಆ ರೂಪವು ಚತುರ್ಭುಜೆಯೂ, ಖಡ್ಗಾದಿ ಆಯುಧಗಳನ್ನು ಧರಿಸಿದವಳೂ, ಮುಂಡಮಾಲಾಲಂಕೃತಳೂ, ಕೃಷ್ಣವರ್ಣೆಯೂ ಆಗಿದ್ದಳು. ಇವಳೇ ಮಹಾಕಾಳೀ. ಇನ್ನೊಮ್ಮೆ ಸತ್ವಗುಣದ ಉಪಾಧಿಯಿಂದ ಈ ಮಹಾಲಕ್ಷ್ಮಿ ಧರಿಸಿದ ರೂಪವೇ ಮಹಾಸರಸ್ವತಿ. ಈಕೆ ಚಂದ್ರನಂತೆ ಶುಭ್ರಕಾಂತಿಯುಳ್ಳವಳೂ, ಅಕ್ಷಮಾಲಾದಿಗಳನ್ನು ಧರಿಸಿದ ಚತುರ್ಭುಜೆಯೂ ಆಗಿದ್ದಳು. ನಂತರ ಮಹಾಲಕ್ಷ್ಮಿಯು, ಸರಸ್ವತಿಯನ್ನು ಬ್ರಹ್ಮದೇವನಿಗೂ, ಮಹಾಕಾಳಿಯನ್ನು ಪರಶಿವನಿಗೂ ಪತ್ನಿಯನ್ನಾಗಿ ಮಾಡಿ,

ಸೃಷ್ಟಿ, ಸಂಹಾರ ಕಾರ್ಯದ ಭಾರವನ್ನು ವಹಿಸಿದಳು. ಅಂತೆಯೇ ತಾನು ಶ್ರೀಮನ್ನಾರಾಯಣನನ್ನು ವರಿಸಿ, ಜಗತ್ತಿನ ಪಾಲನೆಯ ಭಾರವನ್ನು ಹೊತ್ತಳು.

ವೈಕೃತಿಕ ರಹಸ್ಯ : ವೈಕೃತಿಕರಹಸ್ಯದಲ್ಲಿ ಮಧುಕೈಟಬಾದಿ ದೈತ್ಯರ ಸಂಹಾರಕ್ಕಾಗಿ ಅವತರಿಸಿದ ದೇವೀತ್ರಯರ ವರ್ಣನೆ, ನಂತರ ಪೂಜಾ ವಿಧಾನಗಳನ್ನು ತಿಳಿಸಲಾಗಿದೆ.

ವಿಷ್ಣುವಿನ ಯೋಗ ನಿದ್ರೆಯೇ ಮಹಾಕಾಳಿ. ತಮೋಗುಣಮಯಿ ಯಾದ ಈಕೆ ದಶಮುಖ, ದಶಭುಜ ಹಾಗೂ ದಶಪಾದಗಳುಳ್ಳವಳು. ಈಕೆ ಕೃಷ್ಣವರ್ಣೆ. ಮಧುಕೈಟಭರ ಸಂಹಾರಕ್ಕಾಗಿ ಬ್ರಹ್ಮದೇವನು ಈಕೆ ಯನ್ನು ಬಹುವಾಗಿ ಸ್ತುತಿಸಿದ್ದನು. ಈಕೆ ಭಯಂಕರ ಸ್ವರೂಪಿಯಾದರೂ, ಭಕ್ತರಿಗೆ ರೂಪ, ಸೌಭಾಗ್ಯ, ಸಂಪತ್ತುಗಳನ್ನು ಕರುಣಿಸಲು ಸಮರ್ಥಳು.

ಮಹಿಷ ದೈತ್ಯನ ಸಂಹಾರಕ್ಕಾಗಿ ಸಮಸ್ತ ದೇವತೆಗಳ ಅಂಗಗಳಿಂದ ಜನಿಸಿದ ಶಕ್ತಿ ವಿಶೇಷವೇ ಮಹಾಲಕ್ಷ್ಮೀ. ಈಕೆ ಅಷ್ಟಾದಶಭುಜೆ. ತ್ರಿಗುಣ ಮಯಿ ಪ್ರಕೃತಿರೂಪಳಾದ ಈ ದೇವಿ ಶುಭ್ರ ಮುಖಿಯೂ, ಶ್ಯಾಮಭುಜೆಯೂ, ರಕ್ತಚರಣೆಯೂ ಆಗಿರುವಳು. ಅಕ್ಷಮಾಲಾ, ಪಾಶ, ಬಾಣ, ಖಡ್ಗ ಇತ್ಯಾದಿಗಳು ಈಕೆಯ ಭುಜಗಳನ್ನು ಅಲಂಕರಿಸಿವೆ. ಈ ಮಹಾಲಕ್ಷ್ಮಿ ಯನ್ನು ಭಕ್ತಿಯಿಂದ ಆರಾಧಿಸುವವನು, ದೇವತೆಗಳಿಗೂ, ಲೋಕಕ್ಕೂ ಸ್ವಾಮಿಯಾಗುತ್ತಾನೆ.

ಸತ್ತ್ವಗುಣವನ್ನು ಆಶ್ರಯಿಸಿ ಪಾರ್ವತಿಯ ಶರೀರದಿಂದ ಪ್ರಕಟ ಳಾದವಳು ಮಹಾ ಸರಸ್ವತಿ. ಈಕೆ ಶುಂಭಾದಿ ದೈತ್ಯರ ಸಂಹಾರಕ್ಕಾಗಿ ಅವತರಿಸಿದವಳು. ಅಷ್ಟಭುಜೆಯಾಗಿ ಬಾಣ, ಮುಸಲ, ಶೂಲಾದಿ ದಿವ್ಯಾ ಯುಧಗಳನ್ನು ಈಕೆ ಧರಿಸಿದವಳು. ಈ ಮಹಾ ಸರಸ್ವತಿಯ ಆರಾಧಕನು ಸರ್ವಜ್ಞನಾಗುವನು.

ಹೀಗೆ ಮೂವರ ಸ್ವರೂಪವನ್ನು ವಿವರಿಸಿ, ಈ ರಹಸ್ಯದಲ್ಲಿ ಮುಂದು ವರೆದು ಮೂವರ, ಸಮಷ್ಟಿ, ವ್ಯಷ್ಟಿ, ಪೂಜಾಕ್ರಮಗಳನ್ನು ತಿಳಿಸಲಾಗಿದೆ.

ಮೂರ್ತಿ ರಹಸ್ಯವೆಂಬುದು ಈ ಭಾಗಕ್ಕೆ ಅನ್ವರ್ಥ. ಇದರಲ್ಲಿ ನಂದಾ, ರಕ್ತದಂತಿಕಾ, ಶಾಕಂಭರೀ, ಭೀಮಾ, ಇವರುಗಳ ರೂಪ, ಆಯುಧ ಹಾಗೂ ವೈಶಿಷ್ಟ್ಯತೆಗಳನ್ನು ಈ ಮೂರನೆಯ ರಹಸ್ಯದಲ್ಲಿ ವಿವರಿಸಲಾಗಿದೆ.

ದೇವೀ ಮಹತ್ಮ್ಯವೆಂಬ, ಸಪ್ತಶತಿಯ ಮೂರು ಚರಿತ್ರೆಗಳಿಗೂ ಪ್ರತ್ಯೇಕವಾದ ಋಷಿ, ಛಂದಸ್ಸು, ದೇವತೆ, ಶಕ್ತಿ, ಬೀಜ, ತತ್ತ್ವ, ಸ್ವರೂಪಗಳು ಈ ರೀತಿಯಾಗಿವೆ.

		ಪ್ರಥಮ ಚರಿತ್ರ	ಮಧ್ಯಮ ಚರಿತ್ರ	ಉತ್ತಮ ಚರಿತ್ರ
ಋಷಿ	—	ಬ್ರಹ್ಮ	ವಿಷ್ಣು	ರುದ್ರ.
ಛಂದಸ	—	ಗಾಯತ್ರಿ	ಉಷ್ಣಿಕ್	ಅನುಷ್ಟುಪ್
ದೇವತೆ	—	ಮಹಾಕಾಳೀ	ಮಹಾಲಕ್ಷ್ಮೀ	ಮಹಾಸರಸ್ವತಿ
ಶಕ್ತಿ	—	ನಂದಾ	ಶಾಕಂಭರೀ	ಭೀಮಾ
ಬೀಜ	—	ರಕ್ತದಂತಿಕಾ	ದುರ್ಗಾ	ಭ್ರಾಮರೀ
ತತ್ತ್ವ	—	ಅಗ್ನಿ	ವಾಯು	ಸೂರ್ಯ
ಸ್ವರೂಪ	—	ಋಗ್ವೇದ	ಯಜುರ್ವೇದ	ಸಾಮವೇದ

ದೇವೀ ಸಪ್ತಶತೀ ವಿಶಿಷ್ಟವಾದ ಮಹಾ ಮಂತ್ರಾತ್ಮಕ ಗ್ರಂಥ. ಇದರ ಮೂಲಕ ಭಗವತಿಯ ಉಪಾಸನಾ ಬಹುಮುಖವಾದದ್ದು. ಕಾಮ್ಯೋಪಾಸಕರಿಗೆ ಮಾರ್ಗದರ್ಶನ ಮಾಡುವ ಹಲವಾರು ಗ್ರಂಥಗಳು ಇದಕ್ಕೆ ಸಂಬಂಧಿಸಿದಂತೆ ಪ್ರಸಿದ್ಧವಾಗಿವೆ. ದುರ್ಗೋಪಾಸನ ಕಲ್ಪದ್ರುಮ, ಡಾಮರೀ ತಂತ್ರ, ಕಾತ್ಯಾಯನೀ ತಂತ್ರ, ಚಿದಂಬರ ಸಹಿಂತಾ, ಮರೀಚಕಲ್ಪ, ಮೇರು ತಂತ್ರ, ಭುವನೇಶ್ವರೀ ತಂತ್ರ, ಕ್ರೋಡ ತಂತ್ರ, ರುದ್ರಯಾಮಳ, ವಾರಾಹೀ ತಂತ್ರ, ಇವುಗಳು ಮುಖ್ಯವಾದವು.

ಇದರಂತೆ, ಈ ಗ್ರಂಥಕ್ಕೆ ಹಲವಾರು ವ್ಯಾಖ್ಯಾನಗಳೂ ಉಪಲಬ್ಧವಿವೆ. ಶಾಂತನವೀ, ಪುಷ್ಪಾಂಜಲೀ, ರಾಮಾಶ್ರೀ, ನಾಗೇಶೀ, ಗುಪ್ತವತೀ, ದಂಶೋದ್ಧಾರಂ, ದುರ್ಗಾ ಪ್ರದೀಪಂ, ಸಪ್ತಶತೀ ಸರ್ವಸ್ವಂ ಇತ್ಯಾದಿಗಳು.

ಈ ವ್ಯಾಖ್ಯೆಗಳಲ್ಲಿಯೂ, ಸಪ್ತಶತಿಯ ಉಪಾಸನೆಯ ಕಾಮ್ಯಫಲಗಳನ್ನು ವಿಶೇಷವಾಗಿ ಉಲ್ಲೇಖಿಸಲಾಗಿದೆ.

ಒಟ್ಟಿನಲ್ಲಿ ''ಸಪ್ತಶತೀ'' ಎಂಬುದು ಒಂದು ಅಪೂರ್ವ ಮಹಾತ್ಮ್ಯೆಯನ್ನು ಪಡೆದ ಗ್ರಂಥ. ಇದು ವೇದದಂತೆ ಅಪೌರುಷೇಯ ಎಂದು ಭುವನೇಶ್ವರಿ ಸಂಹಿತೆಯಲ್ಲಿ ಉಕ್ತವಾದ. ಸಪ್ತಶತಿಯ ಮಹತ್ತನ್ನು ವಿಷ್ಣುವು ಮುಕ್ಕಾಲು ಭಾಗ ಮಾತ್ರ ಅರಿಯಲು ಸಾಧ್ಯ. ಬ್ರಹ್ಮದೇವನು ಅರ್ಧಭಾಗ ಮಾತ್ರ ಅರಿಯಬಲ್ಲ. ಭಗವಾನ್ ವೇದವ್ಯಾಸರು ಕಾಲು ಭಾಗ ಮಾತ್ರ ಅರಿಯುವ ಶಕ್ತಿಯುಳ್ಳವರು ಎಂದು ಮಾರ್ಕಂಡೇಯ ಪುರಾಣದಲ್ಲಿ ಹೇಳಲಾಗಿದೆ.

ಸಪ್ತ ಶ್ಲೋಕಾ

ಜ್ಞಾನಿನಾಮಪಿ ಚೇತಾಂಸಿ ದೇವೀ ಭಗವತೀಹಿಸಾ ।
ಬಲಾದಾಕೃಷ್ಯ ಮೋಹಾಯ ಮಹಾಮಾಯಾ ಪ್ರಯಚ್ಛತಿ ॥ ೧ ॥

ದುರ್ಗೇಸ್ಮೃತಾ ಹರಸಿ ಭೀತಿ ಮಶೇಷ ಜಂತೋಃ
ಸ್ವಸ್ಥೈಸ್ಮೃತಾ ಮತಿಮತೀವ ಶುಭಾಂ ದದಾಸಿ ।
ದಾರಿದ್ರ್ಯ ದುಃಖ ಭಯಹಾರಿಣಿ ಕಾ ತ್ವದನ್ಯ
ಸರ್ವೋಪಕಾರಕರಣಾಯ ಸದಾರ್ದ್ರಚಿತ್ತಾ ॥ ೨ ॥

ಸರ್ವ ಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ ।
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಸ್ತುತೇ ॥ ೩ ॥

ಶರಣಾಗತ ದೀನಾರ್ತ ಪರಿತ್ರಾಣಪರಾಯಣೇ ।
ಸರ್ವಸ್ಯಾರ್ತಿಹರೇ ದೇವಿ ನಾರಾಯಣಿ ನಮೋಸ್ತುತೇ ॥ ೪ ॥

ಸರ್ವ ಸ್ವರೂಪೇ ಸರ್ವೇಶಿ ಸರ್ವಶಕ್ತಿ ಸಮನ್ವಿತೇ ।
ಭಯೇಭ್ಯ ಸ್ತ್ರಾಹಿನೋ ದೇವಿ ದುರ್ಗೇ ದೇವಿ ನಮೋಸ್ತುತೇ ॥ ೫ ॥

ರೋಗಾ ನಶೇಷಾನ ಪಹಂಸಿ ತುಷ್ಟಾ
ರುಷ್ಟಾತು ಕಾಮಾನ್ಯಕಲಾನಭೀಷ್ಟಾನ್

ತ್ವಾಮಾಶ್ರಿತಾನಾಂ ನ ವಿಪನ್ನರಾಣಾಂ
ತ್ವಾಮಾಶ್ರಿತಾ ಹ್ಯಾಶ್ರಯತಾಂ ಪ್ರಯಾಂತಿ || ೬ ||

ಸರ್ವಾಬಾಧಾ ಪ್ರಶಮನಂ ತ್ರೈಲೋಕ್ಯಸ್ಯಾಖಿಲೇಶ್ವರಿ
ಏನಮೇವ ತ್ವಯಾ ಕಾರ್ಯಮಸ್ಮಾದ್ವೈರಿ ವಿನಾಶನಂ || ೭ ||

ಕೆಲವು ಕಾಮ್ಯಫಲಗಳಿಗಾಗಿ ಉಪಾಸನೆ ಮಾಡಬಹುದಾದ ಮಂತ್ರಗಳು

ಪತ್ನೀಂ ಮನೋರಮಾಂ ದೇಹಿ ಮನೋವೃತ್ತಾನುಸಾರಿಣೀಂ |
ತಾರಿಣೀಂ ದುರ್ಗಸಂಸಾರ ಸಾಗರಸ್ಯ ಕುಲೋದ್ಭವಾಂ ||

(ಅರ್ಹಳಾದ ಪತ್ನಿಯ ಪ್ರಾಪ್ತಿಗಾಗಿ)

ಇತ್ಥಂ ಯದಾ ಯದಾ ಬಾಧಾ ದಾನವೋತ್ಥಾ ಭವಿಷ್ಯತಿ |
ತದಾ ತದಾ ವತೀರ್ಯಾಹಂ ಕರಿಷ್ಯಾಮ್ಯರಿಸಂಕ್ಷಯಂ ||

(ಮಹಾಮಾರೀ ಶಾಂತಿಗಾಗಿ)

ಹಿನಸ್ತಿ ದೈತ್ಯತೇಜಾಂಸಿ ಸ್ವನೇನಾಪೂರ್ಯ ಯಾ ಜಗತ್ |
ಸಾ ಘಂಟಾ ಪಾತು ನೋ ದೇವಿ ಪಾಪೇಭ್ಯೋನಃ ಸುತಾನಿವ ||

(ಭೂತ ಪಿಶಾಚಬಾಧಾ ನಿವೃತ್ತಿಗಾಗಿ)

ಸೃಷ್ಟಿ ಸ್ಥಿತಿ ವಿನಾಶಾನಾಂ ಶಕ್ತಿಭೂತೇ ಸನಾತನಿ |
ಗುಣಾಶ್ರಯೇ ಗುಣಮಯೇ ನಾರಾಯಣಿ ನಮೋಸ್ತುತೇ ||

(ಸೌಭಾಗ್ಯ ಸಂಪತ್ತಿಗಾಗಿ)

ರಕ್ಷಾಂಸಿ ಯತ್ರೋಗ್ರವಿಷಾಶ್ಚ ನಾಗಾ
ಯತ್ರಾರಯೋ ದಸ್ಯುಬಲಾನಿ ಯತ್ರ ।
ದಾವಾನಲೋ ಯತ್ರ ತಥಾಬ್ಧಿಮಧ್ಯೇ
ತತ್ರ ಸ್ಥಿತಾ ತ್ವಂ ಪರಿಪಾಸಿ ವಿಶ್ವಂ ॥

(ವಿಷಭಯ ನಿವೃತ್ತಿ, ಶತ್ರು ನಿವೃತ್ತಿ)

ತೇ ಸಮ್ಮತಾ ಜನಪದೇಷು ಧನಾನಿ ತೇಷಾಂ
ತೇಷಾಂ ಯಶಾಂಸಿ ನ ಚ ಸೀದತಿ ಧರ್ಮವರ್ಗಃ ।
ಧನ್ಯಾಸ್ತ ಏವ ನಿಭೃತಾತ್ಮಜ ಭೃತ್ಯದಾರಾ
ಯೇಷಾಂ ಸದಾಭ್ಯುದಯದಾ ಭವತೀ ಪ್ರಸನ್ನಾ

(ಧನಪ್ರಾಪ್ತಿಗಾಗಿ)

ತತೋ ವವ್ರೇ ನೃಪೋ ರಾಜ್ಯಮವಿಭ್ರಂಶ್ಯನ್ಯಜನ್ಮನೀ
ತತ್ರೈವ ಚ ನಿಜಂ ರಾಜ್ಯಂ ಹತಶತ್ರುಬಲಂ ಬಲಾತ್

(ರಾಜ್ಯಪ್ರಾಪ್ತಿಗಾಗಿ)

ಭಗವತ್ಯಾ ಕೃತಂ ಸರ್ವಂ ನ ಕಿಂಚಿದವಶಿಷ್ಯತೇ
ಯದಯಂ ನಿಹತಃ ಶತ್ರುರಸ್ಮಾಕಂ ಮಹಿಷಾಸುರಃ

(ಸರ್ವಕಾಮಾ ಸಿದ್ಧಿಗಾಗಿ)

ಸ ಗತಾಸುಃ ಪಪಾತೋರ್ವ್ಯಾಂ ದೇವೀ ಶೂಲಾಗ್ನಿವಿಕ್ಷತಃ ।
ಚಾಲಯನ್ ಸಕಲಾಂ ಪೃಥ್ವೀಂ ಸಾಬ್ಧಿದ್ವೀಪಾಂ ಸ ಪರ್ವತಾಂ ॥

(ಶತ್ರುಸೈನ್ಯ ನಾಶಕ್ಕಾಗಿ)

ವಿಶ್ವೇಶ್ವರಿ ತ್ವಂ ಪರಿಪಾಸಿ ವಿಶ್ವಂ
ವಿಶ್ವಾತ್ಮಿಕಾ ಧಾರಯಸೀಹ ವಿಶ್ವಂ ।
ವಿಶ್ವೇಶವಂದ್ಯಾ ಭವತೀ ಭವಂತಿ
ವಿಶ್ವಾಶ್ರಯಾ ಯೇ ತ್ವಯಿ ಭಕ್ತಿನಮ್ರಾಃ ।

(ಜಗತ್ ಕ್ಷೇಮಕ್ಕಾಗಿ)

ದೇವಿ ಪ್ರಪನ್ನಾರ್ತಿಹರೇ ಪ್ರಸೀದ ಪ್ರಸೀದ ಮಾತರ್ಜಗತೋಽಖಿಲಸ್ಯ ।
ಪ್ರಸೀದ ವಿಶ್ವೇಶ್ವರಿ ಪಾಹಿ ವಿಶ್ವಂ ತ್ವಮೀಶ್ವರೀ ದೇವಿ ಚರಾಚರಸ್ಯ ॥
(ಜಗತ್ತಿಗೆ ಒದಗಿದ ಸಂಕಷ್ಟ ನಿವಾರಣೆಗಾಗಿ)

ತತಃ ಶತೇನ ನೇತ್ರಾಣಾಂ ನಿರೀಕ್ಷಿಷ್ಯಾಮಿ ಯನ್ಮುನೀನ್ ।
ಕೀರ್ತಯಿಷ್ಯಂತಿ ಮನುಜಾಃ ಶತಾಕ್ಷೀಮಿತಿ ಮಾಂ ತತಃ ॥
(ಕೀರ್ತಿ ಪ್ರಾಪ್ತಿಗಾಗಿ)

ಏವಂ ದೇವ್ಯಾವರಂ ಲಬ್ಧ್ವಾ ಸುರಥಃ ಕ್ಷತ್ರಿಯರ್ಷಭಃ ।
ಸೂರ್ಯಾಜ್ಜನ್ಮ ಸಮಾಸಾದ್ಯ ಸಾವರ್ಣಿರ್ಭವಿತಾಮನುಃ ॥
(ಇಷ್ಟವರ ಪ್ರಾಪ್ತಿಗಾಗಿ)

ಇತ್ಯುಕ್ತ್ವಾ ಸಾ ತದಾ ದೇವೀ ಗಂಭೀರಾಂತಃ ಸ್ಮಿತಾ ಜಗೌ ।
ದುರ್ಗಾ ಭಗವತೀ ಭದ್ರಾಯ ಯೇದಂ ಧಾರ್ಯತೇ ಜಗತ್ ॥
(ಬಿಕ್ಕಲು, ಮೂಕತನ ನಿವೃತ್ತಿಗಾಗಿ)

ಈ ಮಂತ್ರಗಳನ್ನು ಸಪ್ತಶತಿಗೆ ಸಂಪುಟೀಕರಣ ಮಾಡಿ ಪ್ರಯೋಗಿಸುವುದರಿಂದ ಅಥವಾ ಪ್ರತ್ಯೇಕವಾಗಿ, ಲಕ್ಷಾವೃತಿಗೆ ಕಮ್ಮಿಯಾಗದಂತೆ ಜಪಿಸುವುದರಿಂದ ನಿರ್ದಿಷ್ಟವಾದ ಕಾಮ್ಯಫಲವನ್ನು ಪಡೆಯಬಹುದು.

ಹೀಗೆ ತನ್ನದೇ ಆದ ಮಹತ್ತನ್ನು ಪಡೆದಿರುವ ದುರ್ಗಸಪ್ತಶತೀ ಭಾರತೀಯ ಧರ್ಮದ ಸರ್ವಮಾನ್ಯ ಗ್ರಂಥ. ಕರ್ಮ-ಭಕ್ತಿ, ಜ್ಞಾನಾತ್ಮಕವಾದ ತ್ರಿವೇಣಿಯ ಈ ಸಂಗಮ ಭಕ್ತವಾಂಛಾಕಲ್ಪತರು.

ದೇವಿ ಪ್ರಪನ್ನಾರ್ತಿಹರೇ ಪ್ರಸೀದ
ಪ್ರಸೀದ ಮಾತರ್ಜಗತೋಽಖಿಲಸ್ಯ ।
ಪ್ರಸೀದ ವಿಶ್ವೇಶ್ವರಿ ಪಾಹಿ ವಿಶ್ವಂ
ತ್ವಮೀಶ್ವರೀ ದೇವಿ ಚರಾಚರಸ್ಯ ॥

ಸಪ್ತಶತೀ ಸಂಕ್ಷಿಪ್ತ ಕಥಾ

“ಸ್ವಾರೋಚಿಷ” ಎಂಬ ಮನುವಿನ ಕಾಲದಲ್ಲಿ ಚೈತ್ರವಂಶದಲ್ಲಿ ಜನಿಸಿದ ಸುರಥನೆಂಬ ದೊರೆಯು ರಾಜ್ಯವನ್ನು ಆಳುತ್ತಿದ್ದನು. ಆತನು ತನ್ನ ಪ್ರಜೆಗಳನ್ನು ಮಕ್ಕಳಂತೆ ನೋಡುತ್ತಾ ಸುಖಶಾಂತಿಯಿಂದ ಕಾಲವನ್ನು ಕಳೆಯುತ್ತಿದ್ದನು. ಆದರೆ ಈತನನ್ನು ಕೋಲಾವಿಧ್ವಂಸಿಗಳೆಂಬ ನೆರೆಯರಸರು ದ್ವೇಷಿಸಲಾರಂಭಿಸಿ ಒಮ್ಮೆ ಈತನಮೇಲೆ ದಂಡೆತ್ತಿ ಬಂದರು. ಭಯಂಕರವಾದ ಯುದ್ಧವಾಗಿ ಈತನ ವಿಶಾಲವಾದ ರಾಜ್ಯವನ್ನು ಕಿತ್ತುಕೊಂಡರು. “ಸುರಥನು” ಓಡಿ ಬಂದು ತನ್ನ ರಾಜಧಾನಿಯಲ್ಲಿ ತಲೆಮರೆಯಿಸಿಕೊಂಡನು. ಅಲ್ಲಿಯೂ ಆತನ ಮಂತ್ರಿಗಳು ಅವನಿಗೆ ನಾನಾ ವಿಧವಾದ ಹಿಂಸೆಯನ್ನು ಕೊಡಲಾರಂಭಿಸಿದರು.

ಒಮ್ಮೆ “ಸುರಥ”ನು ಬೇಟೆಯಾಡುವ ಸಲುವಾಗಿ ಕುದುರೆಯನ್ನೇರಿ ಕಾಡಿಗೆ ಬಂದನು. ಅಲ್ಲಿ ಆತನು ಒಂದು ರಮ್ಯವಾದ ಆಶ್ರಮವನ್ನು ಕಂಡನು. ದುಷ್ಟ ಮೃಗಗಳೂ ಕೂಡ ತಮ್ಮ ಕ್ರೌರ್ಯವನ್ನು ಬಿಟ್ಟು ಪರಸ್ಪರ ಪ್ರೇಮದಿಂದ ವಾಸಿಸುತ್ತಿದ್ದವು. “ಮೇಧಸ್” ಎಂಬ ಋಷಿಯೊಬ್ಬರು ತನ್ನ ಶಿಷ್ಯರೊಂದಿಗೆ ಅಲ್ಲಿ ತಪೋನಿಷ್ಠರಾಗಿದ್ದರು. ರಾಜನಿಗೆ ಅಲ್ಲಿಯ ವಾತಾವರಣ ಮನಸ್ಸಿಗೆ ಹಿಡಿಯಿತು. ಕೆಲವು ಕಾಲ ಅಲ್ಲಿಯೇ ತಂಗಿದನು. ಒಮ್ಮೊಮ್ಮೆ ತನ್ನ ದುರ್ದಶೆಗಾಗಿ ಚಿಂತಿಸುತ್ತ ತನಗೆ ತಾನೇ ದುಃಖಪಡುತ್ತ ಇರುವಾಗ ಅಕಸ್ಮಿಕವಾಗಿ ಅಲ್ಲಿಗೆ ಬಂದ ಒಬ್ಬ ವೈಶ್ಯನನ್ನು ಕಂಡನು. ಇವರಿಬ್ಬರಿಗೂ ಪರಸ್ಪರ ಪರಿಚಯವಾಗಿ ಮಾತುಕತೆಯಾರಂಭವಾಯಿತು. ವೈಶ್ಯನು ತನ್ನ ವಿಷಯವನ್ನು ತಿಳಿಸುತ್ತಾ “ನಾನು ಹಣವಂತ ಕುಲದಲ್ಲಿ ಹುಟ್ಟಿದ ಒಬ್ಬ ವೈಶ್ಯ. ನನ್ನ ಹೆಸರು “ಸಮಾಧಿ”; ನನ್ನ ಕೈಹಿಡಿದ ಹೆಂಡತಿ, ನನ್ನ ಮಕ್ಕಳು ಹಾಗೆಯೇ ನನ್ನ ಬಂಧುಗಳೂ ಕೂಡ ನನ್ನ ಬಳಿಯಲ್ಲಿರುವ ಸಿರಿ ಸಂಪತ್ತೆಲ್ಲವನ್ನೂ ಕಿತ್ತುಕೊಂಡು ನನ್ನನ್ನು ಕಾಡುಪಾಲು ಮಾಡಿದರು.” ಈ ಕಾಡಿನಲ್ಲಿ ನಾನು ದುಃಖಪಡುತ್ತಿದ್ದರೂ ಆ ಹೆಂಡಿರು ಮಕ್ಕಳ ಮೇಲಿನ ಮಮತೆ ನನ್ನನ್ನು ಬಾಧಿಸುತ್ತಿದೆ. ಅವರ ವಿಷಯದಲ್ಲಿ ನನ್ನ ಮನಸ್ಸು

ಏನಾದರೂ ಕಲ್ಲಾಗದು. ಈ ವಿಚಿತ್ರಕ್ಕಾಗಿ ಏನೆಂದು ಹೇಳಲಿ ? ಎಂದು ಆ ವೈಶ್ಯನು ತನ್ನ ಮಾತನ್ನು ಮುಗಿಸಿದನು

ನಂತರ ಅವರಿಬ್ಬರೂ ಋಷಿಯ ಬಳಿಗೆ ಹೋದರು, ಸಾಷ್ಟಾಂಗ ನಮಸ್ಕಾರ ಮಾಡಿ ಆತನ ಬಳಿಯಲ್ಲಿ ಕುಳಿತರು. ತಮ್ಮ ದುಃಖದ ಕಥೆಯನ್ನು ನಿವೇದಿಸಲಾರಂಭಿಸಿದರು.

ಪೂಜ್ಯರೇ ; ತಮ್ಮಲ್ಲಿ ಒಂದು ವಿಷಯವನ್ನು ಕೇಳಬೇಕೆಂದು ನನ್ನ ಮನಸ್ಸು ಹಾತೊರೆಯುತ್ತಿದೆ. ಈ ಮನಸ್ಸನ್ನು ಎಷ್ಟೇ ಬಿಗಿ ಹಿಡಿದರೂ ಅದು ನನ್ನ ಹಿಡಿತಕ್ಕೆ ಬರಲಾರದು. ಪ್ರಕೃತ ರಾಜ್ಯಕೋಶಾದಿಗಳನ್ನು ಕಳೆದುಕೊಂಡು ಈ ಕಾಡಿಗೆ ಬಂದಿದ್ದರೂ, ಇನ್ನೂ ನನ್ನ ಈ ಮನಸ್ಸು ಅದರ ಕಡೆಗೇ ಒಲಿಯುತ್ತದೆ ಇದಕ್ಕೆ ಕಾರಣವಾದರೂ ಏನು ? ನನ್ನ ಜೊತೆಯಲ್ಲಿರುವ ಈ ವೈಶ್ಯನೂ ಅವರ ಬಂಧು ಬಳಗದಿಂದ ಸರ್ವಥಾ ವಂಚಿತನಾಗಿದ್ದಾನೆ. ಹೀಗಿದ್ದರೂ ಅವನ ಮನಸ್ಸಿನಿಂದ ಅವರೆಲ್ಲರ ಪ್ರೇಮ ದೂರವಾಗಿಲ್ಲ. ಇದು ಏತರಿಂದ ? ನಮ್ಮಿಬ್ಬರಿಗೂ ಈ ಲೌಕಿಕ ಸುಖದುಃಖಮಯವಾದದು ಎಂದು ತಿಳಿದಿದೆ. ಆದರೂ ಮನಸ್ಸಿನಲ್ಲಿ ಮಮತೆ ಮನೆಮಾಡಿದೆ. ಮಹಾತ್ಮರೇ, ತಿಳುವಳಿಕೆಯುಳ್ಳವರಾದರೂ ನಾವಿಬ್ಬರೂ ವಿವೇಕಶೂನ್ಯರಾಗಿ ಈ ಮಮತೆಯ ಸುಳಿಯಲ್ಲಿ ಸಿಕ್ಕಿಕೊಳ್ಳಲು ಕಾರಣವೇನು ? ಎಂದು ಸುರಥ ಮಹಾರಾಜನು ಋಷಿಯಲ್ಲಿ ಅರಿಕೆ ಮಾಡಿದನು.

ರಾಜನ ಮಾತಿಗೆ ಉತ್ತರಿಸುತ್ತ, "ಮೇಧಸ್" ಋಷಿಗಳು ನುಡಿದರು "ಅಯ್ಯಾ ಭಾಗ್ಯಶಾಲಿಯೇ ! ಜಗತ್ತಿನಲ್ಲಿ ಎಲ್ಲಾ ಪ್ರಾಣಿಗಳಲ್ಲಿಯೂ ಈ ವಿಷಯಾಸಕ್ತಿ ಸ್ವಾಭಾವಿಕವಾಗಿಯೇ ಇರತಕ್ಕದ್ದು.

ಕೆಲವು ಪ್ರಾಣಿಗಳು ಹಗಲು ಕುರುಡಾದರೆ, ಮತ್ತೆ ಕೆಲವಕ್ಕೆ ಇರಳು ಕುರುಡು. ಹಗಲು ರಾತ್ರಿಗಳಲ್ಲಿಯೂ ಕಣ್ಣು ಕಾಣದವರು ಕೆಲವರು. ಅರಿವು ಮನುಷ್ಯರಿಗೆ ಮಾತ್ರ ಮೀಸಲಾಗಿರತಕ್ಕುದ್ದಲ್ಲ. ಪ್ರಾಣಿ ಸಾಮಾನ್ಯಕ್ಕೂ, ತಿಳುವಳಿಕೆಯೆಂಬುದು ಇರುತ್ತದೆ. ಆಶ್ರಯವು ಭಿನ್ನವಾಗಿದ್ದರೂ, ತಿಳುವಳಿಕೆ ಒಂದೇ ಆಗಿದೆ. ಅದೋ ಇಲ್ಲಿ ನೋಡಿರಿ ! ತಮಗೆ ಹಸಿವಾಗು

ತ್ತಿದ್ದರೂ, ತಮ್ಮ ಹಸಿವನ್ನು ನೀಗಿಸಿಕೊಳ್ಳಬಹುದಾಗಿದ್ದರೂ ಈ ಪಕ್ಷಿಗಳು ತಮ್ಮ ಮರಿಗಳ ಕೊಕ್ಕುಗಳಲ್ಲಿ ಆಹಾರವನ್ನು ನೀಡುತ್ತಿವೆ. ಮನುಷ್ಯರೂ ತಮ್ಮ ಮಕ್ಕಳುಗಳನ್ನು ಪೋಷಿಸುತ್ತಿರುವುದೂ ಇದೇ ರೀತಿಯ ಮಮತೆ ಯಿಂದ. ಈ ಪೋಷಣೆ ಅವರಿಂದ ಮುಂದೆ ತಕ್ಕ ಪ್ರತಿಫಲವನ್ನು ನಿರೀಕ್ಷಿಸಿಯೇ ಮಾಡತಕ್ಕದ್ದಾಗಿದೆ. ಈ ಮಮತೆಯೆಂಬ ಸುಳಿಯಲ್ಲಿ ಜಗತ್ತು ಸಿಕ್ಕಿ ನರಳು ತ್ತಿರುವುದು ಮಹಾಮಾಯೆಯ ಪ್ರಭಾವದಿಂದ. ಈ ಮಹಾಮಾಯಾ ಎಂಬುದು ಜಗತ್ಪತಿಯಾದ ಮಹಾವಿಷ್ಣುವಿನ ಯೋಗನಿದ್ರೆ. ಅದರ ಪ್ರಭಾವ ದಿಂದಲೇ ಜಗತ್ತೆಲ್ಲ ಮೋಹಕ್ಕೆ ಒಳಗಾಗುತ್ತದೆ. ಇದರಲ್ಲಿ ಆಶ್ಚರ್ಯಪಡಬೇಕಾ ದ್ದೇನೂ ಇಲ್ಲ. ಯೋಗನಿದ್ರೆಯೆಂಬ ಈ ಭಗವತಿಯು ಜ್ಞಾನಿಗಳ ಮನಸ್ಸನ್ನು ಬಲಾತ್ಕಾರದಿಂದ ಆಕ್ರಮಿಸಿ ವಶಪಡಿಸಿಕೊಂಡು ವ್ಯಾಮೋಹವನ್ನು ಉಂಟು ಮಾಡುತ್ತಾಳೆ. ಸಮಸ್ತ ಚರಾಚರಗಳನ್ನೂ ತ್ರಿಲೋಕವನ್ನೂ ಸೃಷ್ಟಿಸು ವವಳೂ ಆ ಮಹಾಮಾಯಾದೇವಿಯೇ ಆಗಿದ್ದಾಳೆ. ಅವಳು ಒಲಿದರೆ, ಮನುಷ್ಯರ ಬಂಧನವೆಲ್ಲವೂ ದೂರವಾಗಿ ಬಿಡುಗಡೆಯಾಗುವುದು. ಅವಳೇ ಮುಕ್ತಿಗೆ ಕಾರಣಳಾದ "ಪರಮಾವಿದ್ಯಾ, ಹಾಗೂ ಸಂಸಾರ ಬಂಧನ ಕಾರಣಳೂ" ಸರ್ವೇಶ್ವರಿಯೂ ಆಗಿದ್ದಾಳೆ.

ಋಷಿಗಳ ಈ ಮಾತನ್ನು ಕೇಳಿದ ಸುರಥನಿಗೆ ಆ ಮಹಾಮಾಯೆಯನ್ನು ವಿಸ್ತಾರವಾಗಿ ತಿಳಿಯಬೇಕೆಂದು ಆಸೆಯಾಯಿತು. ಆತನು ಪುನಃ ಪ್ರಶ್ನಿಸಿ ದನು. "ಎಲೈ ಮಹಾತ್ಮರೇ ! ಆ ಮಹಾಮಾಯೆ ಯಾರು ? ನೀವು ವಿವರಿಸಿದ ಆ ಮಹಾಮಾಯೆ ಹೇಗೆ ಹುಟ್ಟಿದಳು ? ಅವಳ ಕಾರ್ಯವಾವುದು ? ಬ್ರಹ್ಮಜ್ಞರೇ ! ಅವಳ ಮಹಾತ್ಮ್ಯೆ ಏನು ? ಅವಳ ಸ್ವರೂಪವೇನು ? ಇತ್ಯಾದಿಗಳನ್ನು ದಯೆಯಿಟ್ಟು ತಿಳಿಸಿರಿ ಎಂದು ದೊರೆಯು ಮತ್ತೆ ಋಷಿ ಗಳನ್ನು ವಿನಯದಿಂದ ಪ್ರಾರ್ಥಿಸಿದನು.

''ಅಯ್ಯಾ ನೃಪನೇ ! ಜಗದ್ವ್ಯಾಪಿನಿಯಾದ ಆ ಮಾಯಾದೇವಿ ನಿತ್ಯಳು. ಆದರೂ ದೇವತೆಗಳ ಕಾರ್ಯಕ್ಕಾಗಿ ಆಗಾಗ್ಗೆ ನಿತ್ಯಳಾದ ಅವಳ ರೂಪಾಂತರದ ಆವಿರ್ಭಾವವಾಗುವುದು.

ಕಲ್ಪಾಂತದಲ್ಲಿ ಜಗತ್ತೆಲ್ಲವೂ ಜಲಮಯವಾಯಿತು. ಶ್ರೀಮನ್ನಾರಾಯಣನು ಈ ವೇಳೆಯಲ್ಲಿ ಶೇಷನ ಮೇಲೆ ಮಲಗಿ ಯೋಗನಿದ್ರೆಯ ಸುಖವನ್ನು ಅನುಭವಿಸಲಾರಂಭಿಸಿದನು. ಆ ವೇಳೆಯಲ್ಲಿ ವಿಷ್ಣುವಿನ ಕಿವಿಯ ಕುಗ್ಗೆಯಿಂದ ಜನಿಸಿದ ಇಬ್ಬರು 'ಮಧು ಕೈಟಭರೆಂಬ' ಘೋರ ರಾಕ್ಷಸರು ಬ್ರಹ್ಮನನ್ನು ಕೊಲ್ಲಲು ಹವಣಿಸಿದರು.

ಶ್ರೀ ವಿಷ್ಣುವಿನ ನಾಭಿಕಮಲದಲ್ಲಿದ್ದ ಬ್ರಹ್ಮದೇವನು ಆ ರಾಕ್ಷಸರನ್ನು ಕಂಡು ದಿಗಿಲುಪಟ್ಟು ಶ್ರೀಮನ್ನಾರಾಯಣನು ನಿದ್ರೆ ಹೋಗುತ್ತಿರುವುದನ್ನು ನೋಡಿ, ಏಕಾಗ್ರತೆಯಿಂದ ಯೋಗನಿದ್ರೆಯನ್ನು ಪ್ರಾರ್ಥಿಸಿ ಭಗವಂತನನ್ನು ಎಚ್ಚರಗೊಳಿಸುವಂತೆ ಬೇಡಿದನು.

'ನಾಶರಹಿತಳೂ, ನಿತ್ಯಳೂ ಆದ ದೇವಿ, ದೇವತೆಗಳಿಗೆ ತೃಪ್ತಿಯನ್ನುಂಟು ಮಾಡುವ, 'ಸ್ವಾಹಾ' ಪಿತೃಗಳಿಗೆ ತೃಪ್ತಿಯನ್ನುಂಟುಮಾಡುವ 'ಸ್ವಧಾ' ಸ್ವರೂಪಿಯಾದವಳು ನೀನು. ನೀನು ಓಂಕಾರ ರೂಪಿ. ಜಗತ್ತಿನ ಸೃಷ್ಟಿಕರ್ತಳು, ಪಾಲನ ಕರ್ತಳು, ಹಾಗೂ ಸಂಹಾರ ಕರ್ತ್ರಿಯೂ ನೀನೇ ಆಗಿರುವಿ ನೀನೇ ಮಹಾವಿದ್ಯಾ, ಮಹಾಮಾಯಾ. ಸತ್ತ್ವಾದಿಗುಣತ್ರಯಗಳಿಂದ ಅರಿಯಲು ಯೋಗ್ಯಳಾದ ಪ್ರಕೃತಿ ಸ್ವರೂಪಿಣಿ. ಜಗತ್ತಿನಲ್ಲಿರುವ ಎಲ್ಲ ವಸ್ತುಗಳಲ್ಲಿ ಅಡಗಿರುವ ಶಕ್ತಿಯೂ ನೀನೇ ! ನಿನ್ನನ್ನು ನಾನು ಏನೆಂದು ಸ್ತುತಿಸಲಿ ? ಪ್ರಕೃತ ಜಗತ್ತಿನ ಸ್ರಷ್ಟೃವೂ ಜಗದ್ರಕ್ಷಕನೂ ಆದವನು, ಯೋಗ ನಿದ್ರಾರೂಪಿಣಿಯಾದ ನಿನ್ನಿಂದ ಮೋಹಗೊಂಡಿದ್ದಾನೆ. ತ್ರಿಮೂರ್ತಿಗಳಾದ ನಮಗೆ ಶರೀರವನ್ನು ಅನುಗ್ರಹಿಸಿದ ನಿನ್ನನ್ನು ಸ್ತುತಿಸಲು ಯಾರು ತಾನೇ ಸಮರ್ಥರಾದಾರು ? ಎಲೌ ದೇವಿಯೇ ! ಜಗತ್ ಸ್ವಾಮಿಯಾದ ಅಚ್ಯುತನು ಜಾಗ್ರತೆಯಾಗಿ ಎಚ್ಚರಗೊಳ್ಳುವಂತೆ ಮಾಡು. ಅವನಿಂದ ಈ ಇಬ್ಬರು ರಾಕ್ಷಸರು ಕೊಲ್ಲಲ್ಪಡಲಿ'.

ಬ್ರಹ್ಮದೇವನ ಈ ಪ್ರಾರ್ಥನೆಗೆ ಒಲಿದ ತಾಮಸೀದೇವಿಯು, ಮಧು ಕೈಟಭರನ್ನು ಸಂಹರಿಸಲು ವಿಷ್ಣುವನ್ನು ಎಚ್ಚರಗೊಳಿಸಲು ಸಿದ್ಧಳಾದಳು. ಆತನ ಕಣ್ಣು, ಮುಖ, ಮೂಗು, ಬಾಹು ಇತ್ಯಾದಿ ಅವಯವಗಳಿಂದ ಹೊರಹೊಮ್ಮಿ ಬ್ರಹ್ಮನ ಎದುರಿನಲ್ಲಿ ನಿಂತಳು.

ಯೋಗನಿದ್ರೆಯಿಂದ ಮುಕ್ತನಾದ ಶ್ರೀಮನ್ನಾರಾಯಣನು ಕೂಡಲೇ ಎಚ್ಚರಗೊಂಡು, ಸಮುದ್ರದಲ್ಲಿ ಸರ್ಪಶಯನದಿಂದ ಮೇಲೆದ್ದು, ಬ್ರಹ್ಮನನ್ನು ಕಬಳಿಸಲು ತೊಡಗಿದ ಆ ರಾಕ್ಷಸರಿಬ್ಬರನ್ನೂ ಕಂಡನು. ಒಡನೆಯೇ ಅವರೊಡನೆ ಕಾಳಗಕ್ಕೆ ಶ್ರೀಹರಿಯು ಸಿದ್ಧನಾದನು ಐದು ಸಾವಿರ ವರ್ಷಗಳ ಕಾಲ ಅವರೊಂದಿಗೆ ಬಾಹು ಯುದ್ಧವು, ನಡೆಯಿತು. ಇಷ್ಟಾದರೂ ಸೋಲ ದಿರುವ ಅವರ ಪರಾಕ್ರಮಕ್ಕೆ ಮೆಚ್ಚಿ, ಅವರೀರ್ವರನ್ನೂ ಶ್ರೀಮನ್ನಾರಾ ಯಣನು ತಮಗೆ ಇಷ್ಟವಾದ ವರವನ್ನು ಬೇಡಿಕೊಳ್ಳುವಂತೆ ತಿಳಿಸಿದನು.

ವಿಷ್ಣುವಿನ ಈ ಮಾತಿನಿಂದ ಸಂತುಷ್ಟರಾದ ಮಧುಕೈಟಭರು ತಮಗೆ ಇಷ್ಟವಾದ ವರವನ್ನು ಬೇಡಲು ಸಿದ್ಧರಾಗಿ, ಎಲ್ಲೆಡೆಗಳಲ್ಲಿಯೂ ತಮ್ಮ ದೃಷ್ಟಿಯನ್ನು ಹಾಯಿಸಿದರು. ಎಲ್ಲಿ ನೋಡಿದರೆ ಅಲ್ಲಿ ಜಲಾವೃತವಾದ ಪ್ರದೇಶವೇ ಕಾಣಿಸುತ್ತಿತ್ತು. ಇದನ್ನು ಕಂಡು ಸಂತೋಷದಿಂದ "ಎಲೈ ಭಗವನ್! ನಮ್ಮನ್ನು ಕೊಲ್ಲುವುದೇ ನಿನ್ನ ಉದ್ದೇಶವಾದರೆ ನೀರಿಲ್ಲದ ಸ್ಥಳದಲ್ಲಿ ನಮ್ಮನ್ನು ಸಂಹರಿಸುವಂತಾಗು. ಇದೇ ನಾವು ಬೇಡುವ ವರ" ಎಂದು ಅವರೀರ್ವರೂ ಬೇಡಿಕೊಂಡರು.

"ತಥಾಸ್ತು" ಎಂದು ಅವರಿಬ್ಬರ ಬೇಡಿಕೆಗೆ ಒಪ್ಪಿಗೆ ಕೊಟ್ಟು, ಶಂಖ, ಚಕ್ರ ಗದಾ ಧಾರಿಯಾದ ಶ್ರೀಮನ್ನಾರಾಯಣನು, ಅವರ ತಲೆಗಳನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಚಕ್ರಾಯುಧದಿಂದ ಅವುಗಳನ್ನು ಕತ್ತರಿಸಿದನು.

ಹೀಗೆ ಮೇಧಸ್ ಋಷಿಗಳು ಸುರಥಸಮಾಧಿಗಳಿಗೆ ಯೋಗನಿದ್ರಾ ದೇವಿಯ ಮಹಾತ್ಮೆಯನ್ನು ವಿವರಿಸಿ, ಮುಂದುವರೆದು ಮಹಿಷಾಸುರ ವಧಕ್ಕೆ ಕಾರಣಳಾದ ಭಗವತಿಯ ದಿವ್ಯ ಚರಿತ್ರೆಯನ್ನು ಕೇಳಿಸಲು ಆರಂಭಿಸಿದರು.

ಹಿಂದೊಮ್ಮೆ ಮಹಿಷಾಸುರನೆಂಬ ರಕ್ಕಸನು ಮಹಾಬಲಿಯಾಗಿ ದೇವತೆ ಗಳಿಗೆ ನಿತ್ಯವೂ ನಾನಾವಿಧವಾದ ಉಪಟಳಗಳನ್ನು ಕೊಡಲಾರಂಭಿಸಿದನು. ಮಹಿಷಾಸುರನಸೇನೆಗೂ ದೇವರಾಜನಾದ ಇಂದ್ರನಸೇನೆಗೂ ನೂರು ವರ್ಷಗಳ ಕಾಲ ಘೋರವಾದ ಸಂಗ್ರಾಮ ನಡೆಯಿತು. ರಾಕ್ಷಸರ ಪರಾಕ್ರಮ ಅಧಿಕವಾಗಿ ದೇವತೆಗಳೆಲ್ಲರೂ ಸೋಲನ್ನು ಅನುಭವಿಸಿದರು. ಮಹಿಷನೇ

ಇಂದ್ರನ ಪದವಿಯನ್ನು ಅಲಂಕರಿಸಿದನು. ಇದರಿಂದ ಕಂಗೆಟ್ಟ ದೇವತೆಗಳೆಲ್ಲ, ಬ್ರಹ್ಮನನ್ನು ಮುಂದಿಟ್ಟುಕೊಂಡು ಶಿವವಿಷ್ಣುಗಳ ಬಳಿಗೆ ಬಂದು, ತಮಗೆ ಉಂಟಾದ ಸೋಲನ್ನೂ, ಮಹಿಷಾಸುರನ ಪರಾಕ್ರಮವನ್ನೂ ಅವರ ಮುಂದೆ ನಿವೇದಿಸಲಾರಂಭಿಸಿದರು. ''ಇಂದು ದೇವಲೋಕವೆಲ್ಲವೂ ರಾಕ್ಷಸರಿಗೆ ಅಧೀನವಾಗಿದೆ. ಸೂರ್ಯ, ಅಗ್ನಿ, ಇಂದ್ರ, ಚಂದ್ರ, ಯಮ ಇತ್ಯಾದಿಗಳ ಸ್ಥಾನವನ್ನೆಲ್ಲಾ ಅವರೇ ಬಲಾತ್ಕರಿಸಿ ಕಿತ್ತುಕೊಂಡು ಮೆರೆಯುತ್ತಿದ್ದಾರೆ. ನಮ್ಮೆಲ್ಲರಿಗೂ ಸ್ವರ್ಗವಾಸ ಕನಸಾಗಿದೆ. ಆ ಮಹಿಷಾಸುರನಿಂದ ಓಡಿಸಲ್ಪಟ್ಟ ನಾವು ಮಾನವರಂತೆ ಭೂಲೋಕದಲ್ಲಿ ಸಂಚರಿಸುತ್ತಿದ್ದೇವೆ. ಆದುದರಿಂದ ನಾವು ನಿಮಗೆ ಶರಣಾಗಿದ್ದೇವೆ. ಅವರನ್ನು ಕೊಲ್ಲಲು ತಕ್ಕ ಉಪಾಯ ವೊಂದನ್ನು ಯೋಚಿಸಿ ನಮ್ಮನ್ನು ರಕ್ಷಿಸಬೇಕು. ಎಂದು ವಿನಯದಿಂದ ಬೇಡಿಕೊಂಡರು.

ದೇವತೆಗಳ ಈ ದುಃಖದ ಸಮಾಚಾರವನ್ನು ಕೇಳುತ್ತಿದ್ದಂತೆಯೇ ಹರಿ, ಹರರಿಗೆ ಕೋಪ ಉಕ್ಕೇರಿತು. ಹುಬ್ಬು ಗಂಟಿಕ್ಕಿತು ಆ ವೇಳೆಗೆ ಅತ್ಯಂತ ಕೋಪಗೊಂಡ ಅವರಿಬ್ಬರ ಮುಖದಿಂದ ಒಂದು ಮಹತ್ತರ ತೇಜಸ್ಸು ಹೊರಹೊಮ್ಮಿತು. ಇಂದ್ರಾದಿ ದೇವತೆಗಳ ಶರೀರದಿಂದಲೂ ಭಿನ್ನಭಿನ್ನವಾದ ತೇಜಸ್ಸು ಅದೇ ವೇಳೆಗೆ ಹೊರಟು, ಶಿವವಿಷ್ಣುಗಳ ಮಹಾತೇಜದೊಂದಿಗೆ ಐಕ್ಯವಾಯಿತು. ಉರಿಯುತ್ತಿರುವ ಪರ್ವತದಂತೆ ತೋರುತ್ತಿರುವ ಅದನ್ನು ದೇವತೆಗಳೆಲ್ಲರೂ ಕಂಡರು. ಸರ್ವದೇವತೆಗಳ ದೇಹದಿಂದ ಜನಿಸಿ ಐಕ್ಯವಾದ ಆ ದಿವ್ಯ ತೇಜಸ್ಸು ಅವರೆಲ್ಲರೂ ನೋಡುತ್ತಿದ್ದಂತೆಯೇ ತನ್ನ ಕಾಂತಿಯಿಂದ ಮೂರು ಲೋಕವನ್ನು ಬೆಳಗುವ ಸ್ತ್ರೀರೂಪವನ್ನು ತಾಳಿತು.

ಶಂಕರನ ತೇಜಸ್ಸು ಮುಖವಾಗಿಯೂ, ಯಮನ ತೇಜಸ್ಸು ಕೇಶಗಳಾಗಿಯೂ, ವಿಷ್ಣುವಿನ ತೇಜಸ್ಸು ಬಾಹುಗಳಾಗಿಯೂ ಮಾರ್ಗೊಂಡವು

ಚಂದ್ರನ ತೇಜಸ್ಸು ಸ್ತನಯುಗ್ಮಗಳಾಗಿ ಪರಿವರ್ತಿತವಾಯಿತು. ಇಂದ್ರನ ತೇಜಸ್ಸು ನಡುವಾಯಿತು, ವರುಣನ ತೇಜಸ್ಸು ಮೊಣಕಾಲು ತೊಡೆಗಳಾದವು, ಭೂಮಿಯ ತೇಜಸ್ಸು ನಿತಂಬವಾಯಿತು. ಹೀಗೆಯೇ ಎಲ್ಲ ಪ್ರಧಾನದೇವತೆಗಳ ತೇಜಸ್ಸುಗಳೆಲ್ಲವೂ, ಆ ಸ್ತ್ರೀಯ ಒಂದೊಂದು ಅಂಗವಾಗಿ ಪರಿಣಮಿಸಿತ್ತು. ಇಂತಹ ತೇಜೋಮೂರ್ತಿಯನ್ನು ನೋಡಿದ ದೇವತೆಗಳಿಗೆ ಅತ್ಯಾನಂದವಾಯಿತು.

ಪಿನಾಕಧಾರಿಯಾದ ಪರಶಿವನು, ತನ್ನ ಶೂಲವನ್ನೂ, ಶ್ರೀಮನ್ನಾರಾಯಣನು ಚಕ್ರವನ್ನೂ, ತಮ್ಮ ತಮ್ಮ ಆಯುಧಗಳಿಂದ ಕಿತ್ತು ಆಕೆಗೆ ಸಮರ್ಪಿಸಿದರು. ಇಂದ್ರನು ವಜ್ರ, ವರುಣನು ಶಂಖ, ಅಗ್ನಿಯು ಶಕ್ತಿ, ವಾಯು ಧನಸ್ಸು ಹೀಗೆ ಆ ದೇವತೆಗಳು ತಮ್ಮ ತಮ್ಮ ಆಯುಧಗಳನ್ನು ಆ ತೇಜೋಮೂರ್ತಿಗೆ ಒಪ್ಪಿಸಿದರು.

ಕ್ಷೀರ ಸಮುದ್ರರಾಜನು, ದಿವ್ಯವಾದ ವಸ್ತ್ರಗಳೆರಡನ್ನೂ, ಸುಂದರವಾದ ಹಾರವನ್ನೂ ಸಮರ್ಪಿಸಿದನು. ವಿಶ್ವಕರ್ಮನು ಉಳಿದ ಎಲ್ಲಾ ಆಭರಣಗಳನ್ನೂ ಉಡುಗೊರೆಯಾಗಿ ಒಪ್ಪಿಸಿದನು. ಹಿಮವಂತನು ವಾಹನವಾಗಿ ಸಿಂಹವನ್ನು ಕೊಟ್ಟನು. ಹೀಗೆ ಸರ್ವಸಮರ್ಥಳನ್ನಾಗಿಯೂ, ಸರ್ವಾಲಂಕಾರ ಭೂಷಿತಳನ್ನಾಗಿಯೂ ಮಾಡಲ್ಪಟ್ಟ ಆಕೆಯು ಒಮ್ಮೆಗೇ ಅಟ್ಟಹಾಸ ಮಾಡಲಾರಂಭಿಸಿದಳು. ಅವಳ ಅಟ್ಟಹಾಸದ ಧ್ವನಿ ಎಲ್ಲೆಲ್ಲಿಯೂ ಪ್ರತಿಧ್ವನಿತವಾಗಿ ಮೊಳಗಲಾರಂಭಿಸಿತು. ಅದರಿಂದ ಆಕಾಶ ತುಂಬಿತಲ್ಲದೇ, ಸಮುದ್ರವೆಲ್ಲ ಅಲ್ಲೋಲಕಲ್ಲೋಲವಾಯ್ತು. ಲೋಕಗಳು ನಡುಗಿದವು. ಭೂಮಿ ಕಂಪಿಸಿತು. ಪರ್ವತಗಳು ಅಲುಗಾಡಿದವು. ದೇವತೆಗಳು ಸಿಂಹವಾಹನೆಯಾದ ಆಕೆಯನ್ನು ಕಂಡು ಸಂತಸಾತಿಶಯದಿಂದ, ಆಕೆಗೆ ಜಯವಾಗಲಿ ಎಂದು ಗಟ್ಟಿಯಾಗಿ ಉಘೇ ಹಾಡಲು ತೊಡಗಿದರು. ಭಕ್ತಿನಮ್ರರಾಗಿ ಋಷಿಮುನಿಗಳು ಆಕೆಯನ್ನು ಸ್ತುತಿಸಿದರು. ಆಕೆಯ ಅಟ್ಟಹಾಸದಿಂದ ಉತ್ಸಾಹಿತರಾದ ಆ ದೇವತೆಗಳು ಆಯುಧಪಾಣಿಗಳಾಗಿ ಸಿದ್ಧರಾದರು.

ಇತ್ತ ಆ ಚಂಡಿಕಾದೇವಿಯ ಅಟ್ಟಹಾಸದ ಧ್ವನಿ ಮಹಿಷನ ಕಿವಿಗೂ ಮುಟ್ಟಿತು. ಈ ಅಪೂರ್ವಧ್ವನಿಯಿಂದ ಕಂಗೆಟ್ಟ ಆ ದೈತ್ಯ ತನ್ನ ಪರಿವಾರದೊಂದಿಗೆ ಆ ಧ್ವನಿಬಂದ ಸ್ಥಳಕ್ಕೆ ಬಂದನು.

ಪಾದಾಘಾತದಿಂದ ನೆಲವನ್ನು ತಗ್ಗಿಸಿದ ಕಿರೀಟದಿಂದ ಗಗನವನ್ನು ಭೇದಿಸಿದ ತನ್ನ ಧನುಸ್ಸಿನ ಠೇಂಕಾರದಿಂದ ಮೂರುಲೋಕವನ್ನೇ ನಡುಗಿಸುತ್ತಿರುವ ದೇವಿಯ ವಿರಾಡ್ರೂಪವನ್ನು ಅವರೆಲ್ಲರೂ ಕಂಡರು. ಭಯಂಕರವಾದ ಯುದ್ಧ ಆರಂಭವಾಯಿತು. ಚಕ್ಷುರ, ಚಾಮರ, ಉದಗ್ರ, ಮಹಾಹನು,

ಅಸಿಲೋಮ, ಬಿಡಾಲ ಮೊದಲಾದ ರಾಕ್ಷಸ ಸೇನಾನಾಯಕರು, ನಾನಾವಿಧವಾದ ಆಯುಧಗಳಿಂದ ದೇವಿಯನ್ನು ಎದುರಿಸಲಾರಂಭಿಸಿದರು. ದೇವಿಯು ಅವುಗಳೆಲ್ಲವನ್ನೂ ನಿರರ್ಥಕಗೊಳಿಸಿದಳು. ಈಕೆಯ ವಾಹನವಾದ ಸಿಂಹವು ಘೋರವಾದ ರೂಪ ತಾಳಿ, ರಾಕ್ಷಸರನ್ನು ಸಂಹರಿಸಲಾರಂಭಿಸಿತು. ಇದೆಲ್ಲದರಿಂದ ಧೈರ್ಯಗೊಂಡ ದೇವತೆಗಳೂ ರಣರಂಗಕ್ಕೆ ಇಳಿದು ದೇವಿಗೆ ಸಹಾಯಕರಾಗಿ ನಿಂತರು. ಹುಲ್ಲುಮೆದೆಯನ್ನು ಸುಡುವ ಅಗ್ನಿಯಂತೆ, ರಾಕ್ಷಸರೆಲ್ಲರೂ ನಿರಾಯಾಸವಾಗಿ ದೇವಿಯಿಂದ ನಾಶಮಾಡಲ್ಪಟ್ಟರು. ಸಂತುಷ್ಟರಾದ ದೇವಾದಿದೇವತೆಗಳು, ದೇವಿಯನ್ನು ವಿವಿಧವಾಗಿ ಸ್ತುತಿಸತೊಡಗಿದರು.

ಹೀಗೆ ನಾಶವಾಗುತ್ತಿರುವ ತಮ್ಮ ಸೇನೆಯನ್ನು ಕಂಡ ಮಹಿಷನು ಕೋಪಾವೇಶದಿಂದ ಅನ್ವರ್ಥನಾಮವಾಗಿ ಅರ್ಥಾತ್ ಕೋಣನ ರೂಪವನ್ನು ಧರಿಸಿ ದೇವಿಯ ಪರಿವಾರವನ್ನು ಭಯಪಡಿಸಲಾರಂಭಿಸಿದನು. ಕಾಲುಗೊರಸು. ಕೊಂಬು, ಶೂಲಗಳಿಂದ ಅದ್ಭುತ ರೀತಿಯಲ್ಲಿ ಹೋರಾಡಲಾರಂಭಿಸಿದನು.

ಕೋಪದಿಂದ ಮೇಲೆ ಬೀಳಲು ಸಿದ್ಧನಾದ ಮಹಿಷಾಸುರನನ್ನು ಚಂಡಿಕಾ ದೇವಿಯು, ವಧಿಸಲು ನಿಶ್ಚಯಿಸಿ, ಪಾಶವನ್ನು ಎಸೆದು ಆತನನ್ನು ಬಂಧಿಸಲು ಆ ರಾಕ್ಷಸನು ಒಡನೆಯೇ ಸಿಂಹದ ರೂಪವನ್ನು ತಾಳಿದನು. ಅಂಬಿಕೆಯು ತಲೆಯನ್ನು ಕತ್ತರಿಸುವಷ್ಟರಲ್ಲಿಯೇ ಆತ ಖಡ್ಗಪಾಣಿಯಾದ ಪುರುಷನ ರೂಪವನ್ನು ತಾಳಿದನು. ಆತನ ಕೈಯಲ್ಲಿದ್ದ ಖಡ್ಗ-ಗುರಾಣಿಗಳು ಕತ್ತರಿಸಲ್ಪಟ್ಟವು. ಒಡನೆಯೇ ಗಜರೂಪವನ್ನು ಧರಿಸಿ ಮಹಿಷ ದೇವಿಯ ವಾಹನವಾದ ಸಿಂಹವನ್ನು ಎದುರಿಸಲು ಹೋದನು. ಆದರೆ ಆತನ ಪ್ರಯತ್ನ ಸಫಲವಾಗಲಿಲ್ಲ. ಮತ್ತೆ ಹಿಂದಿನಂತೆ ಮಹಿಷ ರೂಪದಿಂದ ಹೋರಾಡಲು ಸಿದ್ಧನಾದನು.

ಚಂಡಿಕೆಯು ಮಧುಪಾನ ಮಾಡಿ, ಕೋಪಾತಿಶಯ ಹಾಗೂ ಉತ್ಸಾಹಾತಿಶಯದಿಂದ ಆ ಮಹಿಷನ ಮೇಲೆ ನೆಗೆದು ಪಾದಗಳಿಂದ ಮೆಟ್ಟಿ ತುಳಿದು ಆತನ ಕತ್ತನ್ನು ಶೂಲದಿಂದ ಇರಿದಳು. ಮಹಿಷ ದೇಹದಿಂದ ಅರ್ಧ ಮಾತ್ರ ಹೊರಬಂದಿದ್ದ. ಆ ಮಹಿಷನು ಯುದ್ಧ ಮಾಡುತ್ತಿರುವಾಗಲೇ ದೇವಿಯು ತನ್ನ ದೊಡ್ಡ ಖಡ್ಗದಿಂದ ಆತನ ತಲೆಯನ್ನು ಕತ್ತರಿಸಿ, ಕೆಳಗೆ ಉರುಳಿಸಿದಳು.

ರಾಕ್ಷಸ ಸೈನ್ಯ ಕಂಗೆಟ್ಟಿತು ದೇವತೆಗಳು ನಲಿದು ಕುಣಿದರು. ಗಂಧರ್ವಗಾನ ಮಾಡಿದರು. ಅಪ್ಸರ ಗಣಗಳು ನರ್ತಿಸಿದವು.

ದುರಾತ್ಮನಾದ ಮಹಿಷಾಸುರ ಹಾಗೂ ಆತನ ವಿಶಾಲವಾದ ಸೈನ್ಯವು ಸಂಹರಿಸಲ್ಪಟ್ಟ ನಂತರ ಇಂದ್ರನೇ ಮೊದಲಾದ ದೇವತೆಗಳು, ತಲೆಬಾಗಿ ದೇವಿಗೆ ನಮಿಸುತ್ತಾ ಬಹುವಾಗಿ ಸ್ತುತಿಸಲಾರಂಭಿಸಿದರು.

ಭಗವತಿ ! ನಿನ್ನ ಆತ್ಮ ಶಕ್ತಿಯು ಈ ಸಮಸ್ತ ಚರಾಚರ ಜಗತ್ತಿನ ಆಗುಹೋಗುಗಳಿಗೆ ಆದಿ ಕಾರಣ. ಹರಿ-ಹರ-ಬ್ರಹ್ಮಾದಿಗಳು ನಿನ್ನನ್ನು ಬಣ್ಣಿಸುವ, ಅಂತಯೇ ನಿನ್ನ ಮಹಾತ್ಮ್ಯೆಯನ್ನು ವಿವರಿಸುವ ಸಾಮರ್ಥ್ಯ ವನ್ನು ಪಡೆದಿಲ್ಲ. ಹೇ ! ದೇವಿ ನೀನು ಪುಣ್ಯವಂತರ ಮನೆಯಲ್ಲಿ ಲಕ್ಷ್ಮೀ ಸ್ವರೂಪಳಾಗಿಯೂ, ಪಾಪಿಗಳ ಮನೆಯಲ್ಲಿ ಅಲಕ್ಷ್ಮೀ ಸ್ವರೂಪಳಾಗಿಯೂ ನೆಲೆಸಿರುವವಳು. ಸುಸಂಸ್ಕೃತರ ಹೃದಯದಲ್ಲಿ "ಬುದ್ಧಿ" ರೂಪವಾಗಿಯೂ, ಸತ್ಪುರುಷರಲ್ಲಿ "ಶ್ರದ್ಧೆ" ಯಾಗಿಯೂ ಸತ್ಕುಲ ಪ್ರಸೂತರಲ್ಲಿ "ಲಜ್ಜೆ" ಯಾಗಿಯೂ, ನೆಲೆಸಿರುವವಳು. ನೀನು ತ್ರಿಗುಣೆಯಾದರೂ, ಅವುಗಳ ಪ್ರಭಾವಕ್ಕೆ, ಒಳಗಾದವಳಲ್ಲ. ನೀನೇ ಸ್ವಾಹಾ ಹಾಗೂ ಸ್ವಾಧಾಕಾರಗಳಾಗಿ ದೇವತೆಗಳಿಗೂ, ಪಿತೃಗಳಿಗೂ ತೃಪ್ತಿಯನ್ನುಂಟುಮಾಡುವವಳು. ವೇದ ಮಾತೆಯೂ, ಚತುರ್ವೇದ ಸ್ವರೂಪಿಣಿಯೂ ನೀನೇ ಆಗಿರುವೆ.

"ಹೇ ದುರ್ಗೆ ! ನಿನ್ನ ಸ್ಮರಣೆ ಮಾತ್ರದಿಂದ ಎಲ್ಲಾ ಪ್ರಾಣಿಗಳ ಭಯವು ದೂರವಾಗುವುದು. ದಾರಿದ್ರ್ಯ-ದುಃಖ-ಭಯ ಇವುಗಳು ನಿನ್ನಿಂದಲೇ ನಾಶವಾಗುವುದು. ಜಗತ್ತಿನ ಸರ್ವೋಪಕಾರ ಚಿತ್ತಳಾದ ನೀನು ದಯಾಪರಿಪೂರ್ಣೆ".

ಅಂಬಿಕೆ ! ನಿನ್ನ ಶೂಲದಿಂದ ನಮ್ಮನ್ನು ಕಾಪಾಡು. ನಿನ್ನ ಖಡ್ಗ ಹಾಗೂ ಘಂಟಾನಾದದಿಂದ ನಮ್ಮನ್ನು ರಕ್ಷಿಸು. ಸರ್ವ ದಿಕ್ಕುಗಳಲ್ಲಿಯೂ ನಿನ್ನ ರಕ್ಷಣೆ ನಮಗಿರಲಿ

ಹೀಗೆ ಮಹಿಷ ಮರ್ಧಿನಿಯನ್ನು ಸ್ತುತಿಸಿ ಗಂಧ-ಪುಷ್ಪಾದಿಗಳಿಂದ ಆ ಚಂಡಿಕೆಯನ್ನು ಪೂಜಿಸಿದರು. ಇದರಿಂದ ಸಂತಸಗೊಂಡ, ಅಂಬಿಕೆಯು,

ದೇವತೆಗಳ ಪ್ರಾರ್ಥನೆಯನ್ನು ಅನುಸರಿಸಿ ಸಂಕಟಗ್ರಸ್ತರಾಗಿ ನೆನೆದಂತೆಲ್ಲಾ ಅವರನ್ನು ರಕ್ಷಿಸುವುದಾಗಿ ಭರವಸೆ ಕೊಟ್ಟು ಅದೃಶ್ಯಳಾದಳು.

ಅಂಬಿಕೆಯ ಮೂರನೆಯ ಅವತಾರದ ವಿಸ್ತೃತವಾದ ಕತೆಯನ್ನು "ಸುಮೇಧಸ್" ಮಹರ್ಷಿಗಳು ಹೇಳಲು ಆರಂಭಿಸಿದರು.

ಮಹಾಬಲಶಾಲಿಗಳೂ, ಹಾಗೂ ಮದಾನ್ವಿತರೂ ಆದ ಶುಂಭ ನಿಶುಂಭ ದೈತ್ಯರು ಇಂದ್ರನಿಗೆ ಸಲ್ಲಬೇಕಾದ ಯಜ್ಞಭಾಗಗಳನ್ನು ತಾವೇ ಅನುಭವಿಸ ಲಾರಂಭಿಸಿದರು. ತ್ರೈಲೋಕ್ಯಾಧಿಪತ್ಯ ಇವರಿಬ್ಬರ ಕೈಸೇರಿತು. ದಿಗಧಿಪತಿಗಳ ಸ್ಥಾನ ಮಾತ್ರವಲ್ಲದೆ ಸೂರ್ಯ-ಚಂದ್ರರ ಸ್ಥಾನವೂ ಇವರಿಂದ ಆಕ್ರಮಿ ಸಲ್ಪಟ್ಟಿತು. ಹೀಗೆ ತಮ್ಮ ತಮ್ಮ ಸ್ಥಾನಗಳನ್ನು ಕಳೆದುಕೊಂಡ ದೇವಾಧಿ ದೇವತೆಗಳು "ಅಪರಾಜಿತಾ" ಎಂದು ಅನ್ವರ್ಥನಾಮವನ್ನು ಪಡೆದ, ಹಿಂದೊಮ್ಮೆ ಅಭಯ ದಾನ ಮಾಡಿದ ದೇವಿಯನ್ನು ಸ್ಮರಿಸಿಕೊಂಡು ಸ್ತುತಿಸ ಲಾರಂಭಿಸಿದರು.

''ದೇವಿಗೆ ನಮಸ್ಕಾರ, ಮಹಾ ದೇವಿಗೆ ನಮಸ್ಕಾರ, ಐಶ್ವರ್ಯ, ಹಾಗೂ ಸಿದ್ಧರೂಪಿಗಳಿಗೆ ನಮಸ್ಕಾರ. ದುರ್ಗೆ, ಸರ್ವಕಾರಣೆ, ದುರ್ಗಾರ್ತಿ ಹಾರಿಣಿ, ಇತ್ಯಾದಿ ಅಂಕಿತಗಳನ್ನು ಪಡೆದವಳಿಗೆ ನಮಸ್ಕಾರ. ವಿಷ್ಣು ಮಾಯೆಗೆ ನಮಸ್ಕಾರ.

ಸರ್ವ ಪ್ರಾಣಿಗಳಲ್ಲಿ ಚೇತನಾ, ಬುದ್ಧಿ, ನಿದ್ರಾ, ಲಜ್ಜಾ, ಛಾಯ ಇತ್ಯಾದಿಹಲವು ರೂಪಗಳಿಂದ ನೆಲೆಮಾಡಿಕೊಂಡಿರುವ ದೇವಿಗೆ ನಮೋನಮಃ

ಹೀಗೆ ದೇವತೆಗಳು ಭಕ್ತ್ಯತಿಶಯದಿಂದ ಸ್ತುತಿಸುತ್ತಿರುವಾಗ ದೈವಯೋ ಗದಿಂದ ಪಾರ್ವತಿದೇವಿಯು ಗಂಗೆಯಲ್ಲಿ ಸ್ನಾನಮಾಡಲು ಆ ಸ್ಥಳಕ್ಕೆ ಬಂದಳು. ದೇವತೆಗಳನ್ನು ಕಂಡು ''ನೀವುಗಳು ಈಗ ಯಾರನ್ನು ಈ ರೀತಿಯಾಗಿ ಸ್ತುತಿ ಸುತ್ತಿದ್ದೀರಿ?'' ಎಂದು ಕೇಳುತ್ತಿದ್ದಂತೆಯೇ, ಈಕೆಯ ಶರೀರದಿಂದ ಉದ್ಭವಿ ಸಿದ ''ಶಿವೆ" ಯು ಶುಂಭ-ನಿಶುಂಭರ ಬಾಧೆಗೆ ಒಳಗಾಗಿರುವ ಈ ದೇವತೆಗಳು ನನ್ನನ್ನೇ ಸ್ತುತಿಸುತ್ತಿರುವರು ಎಂದಳು. ಪಾರ್ವತಿಯ ಶರೀರ ಕೇಶದಿಂದ ಉತ್ಪನ್ನಳಾದ ಈಕೆ ''ಕೌಶಿಕೀ'' ಎಂದು ಪ್ರಸಿದ್ಧಳಾದಳು. ಈ ಶಕ್ತಿ

ದೇವತೆಯು ಪಾರ್ವತಿಯ ದೇಹದಿಂದ ಹೊರ ಬಂದೊಡನೆಯೇ, ಪಾರ್ವತಿಯ ದೇಹ ಕೃಷ್ಣವರ್ಣವನ್ನು ತಾಳಿದ್ದರಿಂದ, ಈಕೆಯು "ಕಾಳಿಕಾ" ಎಂಬ ಹೆಸರನ್ನು ಪಡೆದು ಹಿಮವತ್ಪರ್ವತದಲ್ಲಿ ನೆಲೆಸಿದಳು.

ಒಮ್ಮೆ ಚಂಡ-ಮುಂಡರೆಂಬ, ಶುಂಭ ನಿಶುಂಭರ ಸೇವಕರು, ಈ ದೇವಿಯನ್ನು ಕಂಡು, ಈಕೆಯ ಸೌಂದರ್ಯಾತಿಶಯವನ್ನು ಮೆಚ್ಚಿ ತಮ್ಮ ದೈತ್ಯರಾಜರ ಬಳಿಯಲ್ಲಿ ಈ ವಿಷಯವನ್ನು ತಿಳಿಸುತ್ತ "ಮಹಾರಾಜರೇ! ನಾವು ಇಂದು ಹಿಮಾಲಯದಲ್ಲಿ ಅಡ್ಡಾಡುತ್ತಿರುವಾಗ ಓರ್ವ ಸುಂದರ ಸ್ತ್ರೀಯನ್ನು ಕಂಡೆವು. ಇಂತಹ ಸೌಂದರ್ಯಾತಿಶಯವುಳ್ಳ ಸ್ತ್ರೀಯನ್ನು ನಾವು ಈ ಹಿಂದೆ ಎಲ್ಲಿಯೂ ನೋಡಿದ್ದಿಲ್ಲ. ಈಕೆಯ ದೇಹದ ಕಾಂತಿ ದಿಕ್ಕುಗಳನ್ನು ಬೆಳಗುತ್ತಿತ್ತು. ಪ್ರಭುವೇ! ತ್ರಿಲೋಕದ ಅತಿಶಯವಾದ ವಸ್ತು, ಪ್ರಾಣಿ ಇತ್ಯಾದಿಗಳೆಲ್ಲವನ್ನೂ ವಶಪಡಿಸಿಕೊಂಡಿರುವ ತಮ್ಮ ಬಳಿಯಲ್ಲಿ ಇಂತಹ ಸ್ತ್ರೀಯೊಬ್ಬಳು ಇಲ್ಲದಿರುವುದು ಮಹತ್ತಾದ ಕೊರತೆಯೇ ಆಗಿದೆ. ಇಂದ್ರನ ಉಚ್ಚೈಶ್ರವಸ್ಸು, ಬ್ರಹ್ಮನ ಹಂಸ, ಕುಬೇರನ ನಿಧಿ, ವರುಣನ ಸುವರ್ಣವನ್ನು ಉಗುಳುವ ಛತ್ರಿ, ಪ್ರಜಾಪತಿಯ ಶ್ರೇಷ್ಠವಾದ ರಥ ಇವೆಲ್ಲವೂ ನಿಮ್ಮಲ್ಲಿ ಇಂದು ಶೋಭಿಸುತ್ತಿವೆ. ಹೀಗಿರುವಾಗ ಈ ಸ್ತ್ರೀರತ್ನವನ್ನು ನೀವೇಕೆ ಸಂಗ್ರಹಿಸಬಾರದು?" ಎಂದರು.

ಚಂಡಮುಂಡರ ಈ ಮಾತನ್ನು ಕೇಳಿದ ಶುಂಭನು "ಸುಗ್ರೀವ" ನೆಂಬ ತನ್ನ ದೂತನನ್ನು ಕರೆದು, "ಹಿಮಾಚಲದ ಆ ಸುಂದರಿಯನ್ನು ತನ್ನ ಬಳಿಗೆ ಬರುವಂತಹ ಯುಕ್ತಿಯನ್ನು ಮಾಡು" ಎಂದು ಅಪ್ಪಣೆ ಕೊಟ್ಟು ಕಳುಹಿಸಿದನು. ಸುಗ್ರೀವನು ಈ ರಾಜಾಜ್ಞೆಯನ್ನು ಅನುಸರಿಸಿ, ಹಿಮಾಚಲಕ್ಕೆ ಬಂದು, ತಮ್ಮ ರಾಜರ ಪರಾಕ್ರಮಾತಿಶಯವನ್ನು 'ಕಾಳಿಕೆ'ಯ ಮುಂದೆ ವಿವರಿಸಲಾರಂಭಿಸಿದನು.

"ದೇವಿ! ರಾಕ್ಷಸಾಧಿಪತಿಯಾದ ಶುಂಭನು ಇಂದು ತ್ರಿಲೋಕಾಧಿಪತಿಯಾಗಿದ್ದಾನೆ. ದೇವಾಧಿದೇವತೆಗಳೂ ಈತನ ಆಜ್ಞಾಪಾಲಕರಾಗಿದ್ದಾರೆ. ಮೂರು ಲೋಕಗಳ ಶ್ರೇಷ್ಠವಾದ ವಸ್ತುಗಳೆಲ್ಲವೂ ಇಂದು ಈ ಶುಂಭನ ಅರಮನೆಯಲ್ಲಿ ಅಲಂಕರಿಸಿವೆ ಆದುದರಿಂದ ಈ ಲೋಕದಲ್ಲಿ "ಸ್ತ್ರೀರತ್ನವೆಂದು

ಗೌರವಿಸಲ್ಪಡುವ ನೀನೂ ಆತನ ಬಳಿ ಸೇರಲು ಅರ್ಹಳಾಗಿದ್ದೀಯೇ. ಇದರಿಂದ ನಿನ್ನ ಸೌಂದರ್ಯಕ್ಕೆ ಬೆಲೆ ಬಂದಂತಾದೀತು. ಇದರಿಂದ ನೀನು ಅತುಲವಾದ ಐಶ್ವರ್ಯವನ್ನು ಹೊಂದುತ್ತೀಯೆ'' ಸುಗ್ರೀವನ ಈ ಮಾತುಗಳನ್ನು ಕೇಳಿದ ಜಗದ್ಧಾರಣಿ, ಭಗವತಿ ಭದ್ರಕಾಳಿ, ದುರ್ಗಾ ಇತ್ಯಾದಿ ನಾಮಗಳನ್ನು ಹೊಂದಿದ ಈ ದೇವಿ ಹೇಳಲು ಆರಂಭಿಸಿದಳು.

ಅಯ್ಯಾ, ರಾಕ್ಷಸ! ನೀನು ಆಡಿದ ಮಾತಿನಲ್ಲಿ ಸತ್ಯವಿದೆ. ನಿನ್ನ ರಾಜ ಸಹೋದರರು ತ್ರಿಲೋಕ ವಿಜಯಿಗಳು. ಆದರೆ ನಾನು ನೇರವಾಗಿ ಅವರನ್ನು ಸೇರುವಂತಿಲ್ಲ. ನನ್ನದೊಂದು ಪ್ರತಿಜ್ಞೆಯಿದೆ. ನನ್ನ ಅಲ್ಪಮತಿಯಿಂದ ಹಿಂದೆ ನಾನು ಈ ಪ್ರತಿಜ್ಞೆ ಮಾಡಿ ಕೆಟ್ಟೆ. "ಯುದ್ಧದಲ್ಲಿ ನನ್ನೊಡನೆ ಹೋರಾಡಿ ಯಾವಾತ ಗೆಲ್ಲುವನೋ ಅಂಥವನನ್ನೇ ನಾನು ಪತಿಯನ್ನಾಗಿ ಮಾಡಿಕೊಳ್ಳುವೆನು" ಎಂಬುದೇ ನನ್ನ ಆ ಪ್ರತಿಜ್ಞೆಯಾಗಿದೆ. ಆದುದರಿಂದ ಶುಂಭ-ನಿಶುಂಭರಲ್ಲಿ ಯಾರೇ ಆಗಲಿ, ನನ್ನನ್ನು ಗೆದ್ದು ಶೀಘ್ರವಾಗಿ ನನ್ನನ್ನು ವಿವಾಹವಾಗಬಹುದು.''

ದೇವಿಯ ಈ ವಾಕ್ಯಗಳನ್ನು ಆಲಿಸಿದ ಸುಗ್ರೀವ ಮತ್ತೊಮ್ಮೆ ದೈತ್ಯ ರಾಜರ ಶೌರ್ಯ ಪರಾಕ್ರಮವನ್ನು ಹೇಳಿ ತಾನಾಗಿಯೇ ವರಿಸುವಂತೆ ದೇವಿಯನ್ನು ಆಗ್ರಹ ಪಡಿಸಿದಾಗ ತನ್ನ ಪ್ರತಿಜ್ಞೆಯನ್ನು ಮುರಿಯಲು ಸರ್ವಥಾ ಸಾಧ್ಯವಿಲ್ಲ. ಈ ವಿಷಯವನ್ನು ನಿನ್ನ ದೊರೆಗಳಿಗೆ ತಿಳಿಸು. ಅವರು ಯೋಗ್ಯವೆಂದು ಕಂಡದ್ದನ್ನು ಮಾಡಲಿ" ಎಂದು ನಿರ್ದಿಷ್ಟವಾಗಿ ಹೇಳಿ ಸುಗ್ರೀವನನ್ನು ಕಳುಹಿಸಿಕೊಟ್ಟಳು.

ಸುಗ್ರೀವನು ಹಿಮಾಚಲದಿಂದ ನೇರವಾಗಿ ಶುಂಭ ದೈತ್ಯನ ಬಳಿಗೆ ಬಂದು ದೇವಿಯ ಮಾತುಗಳನ್ನು ಚಾಚೂ ತಪ್ಪದೆ ಹೇಳಿದನು. ದೂತನ ಈ ಮಾತುಗಳನ್ನು ಕೇಳಿ ಉಕ್ಕೇರಿದ ಕೋಪವುಳ್ಳ ಈ ಶುಂಭ ''ಧೂಮ್ರಲೋಚನ'' ನೆಂಬ ಸೇನಾಧಿಪತಿಯನ್ನು ಸೇನಾಸಮೇತನಾಗಿ ಹೋಗಿ ಆಕೆಯ ಕೂದಲು ಹಿಡಿದು ಎಳೆದು ತರುವಂತೆ ಆಜ್ಞಾಪಿಸಿದನು. ಕಾಳಿಕಾದೇವಿಯು ಈತನನ್ನು ''ಹುಂಕಾರ'' ದಿಂದಲೇ ಭಸ್ಮ ಮಾಡಿದಳು. ದೇವಿಯ ವಾಹನವಾದ ಸಿಂಹವು ರಾಕ್ಷಸ ಸೈನ್ಯವನ್ನು ನಾಶಮಾಡಿತು.

''ಧೂಮ್ರಲೋಚನ''ನ ವಧೆಯ ವೃತ್ತಾಂತವನ್ನು ಕೇಳಿದ, ಶುಂಭನು ಕೋಪಾತಿಶಯಗೊಂಡು ಚಂಡ-ಮುಂಡರೆಂಬ ಮಹಾಸುರರನ್ನು ದೇವಿಯ ನಿಗ್ರಹಕ್ಕಾಗಿ ಅಟ್ಟಿದನು.

ರಾಜಾಜ್ಞಾಪ್ತರಾದ ಚಂಡ-ಮುಂಡರು ಚತುರಂಗ ಸೇನಾ ಸಮೇತರಾಗಿ ಹಿಮವತ್ಪರ್ವತದ ಶಿಖರವನ್ನು ಸೇರಿದರು. ಸಿಂಹವಾಹನೆಯಾಗಿ ಮಂದಹಾಸವನ್ನು ಬೀರುತ್ತಿರುವ, ಚಿನ್ನದಂತೆ ಮೆರಗುತ್ತಿರುವ ದೇವಿಯನ್ನು ಕಂಡರು. ಆಯುಧಪಾಣಿಗಳಾಗಿ ಆಕೆಯನ್ನು ಹಿಡಿಯಲು ಹೊರಟರು. ಕೋಪಾತಿಶಯದಿಂದ ಆಕೆಯ ಮುಖ ಕಪ್ಪಾಯಿತು. ಹುಬ್ಬುಗಂಟಿಕ್ಕಿದ ಆಕೆಯ ಹಣೆಯಿಂದ ಪಾಶಧಾರಿಣಿಯೂ, ಕರಾಲವದನೆಯೂ ಆದ 'ಕಾಳಿ' ದೇವಿಯು ಒಡನೆಯೇ ಹೊರಬಂದಳು. ಆಕೆಯ ಗರ್ಜನೆ ಧ್ವನಿ ದಿಗಂತದಲ್ಲಿ ಮೊಳಗಿತು. ರುಂಡ ಮಾಲಾಧಾರಿಣಿಯೂ, ಖಟ್ವಾಂಗ ಧಾರಿಯೂ, ಕರಾಳ ವದನೆಯೂ ಆದ ಆಕೆಯ ಶರೀರ ಶುಷ್ಕವಾಗಿತ್ತು. ಅವಳು ವೇಗದಿಂದ ರಾಕ್ಷಸ ಸೈನ್ಯದ ಮೇಲೆ ಬಿದ್ದು ತನ್ನ ಖಟ್ವಾಂಗದಿಂದ ಹಲವರನ್ನು ಸದೆ ಬಡಿದಳು. ಕೆಲವರನ್ನು ನುಂಗಲು ಆರಂಭಿಸಿದಳು. ಈ ಭೀಕರ ದೃಶ್ಯವನ್ನು ಕಂಡ ಚಂಡನು ಆ ಕಾಳಿಯನ್ನು ಬಾಣಗಳ ಸುರಿಮಳೆಯಿಂದಲೂ, ಮುಂಡನು ಸಾವಿರಾರು ಚಕ್ರಗಳನ್ನು ಎಸೆಯುತ್ತಲೂ ಮುಚ್ಚಿದರು. ಇವೆಲ್ಲವನ್ನೂ ವ್ಯರ್ಥಗೊಳಿಸಿದ ಆಕೆ, ಸಿಂಹವನ್ನು ಏರಿ, ಚಂಡನ ಬಳಿಗೆ ನುಗ್ಗಿ, ಅವನನ್ನು ಕೂದಲು ಹಿಡಿದು ಕತ್ತಿಯಿಂದ ಅವನ ಶಿರಸ್ಸನ್ನು ಕತ್ತರಿಸಿದಳು. ಚಂಡನು ಸತ್ತು ಬಿದ್ದದ್ದನ್ನು ನೋಡಿ, ಮುಂಡನು ಆಕೆಯ ಬಳಿಗೆ ನುಗ್ಗಿದನು. ಆಕೆಯು ಕೋಪದಿಂದ, ಅವನನ್ನೂ ಕತ್ತರಿಸಿ ಕೆಡವಿದಳು. ಈ ವೀರರಿಬ್ಬರೂ ಕೆಳಗೆ ಉರುಳಿದುದನ್ನು ನೋಡಿ, ಸೈನ್ಯವು ದಿಕ್ಕಾಪಾಲಾಯಿತು. ಕಾಳಿಯು ಚಂಡನ ಶಿರಸ್ಸನ್ನು, ಮುಂಡವನ್ನೂ ಎತ್ತಿಕೊಂಡು ಬಂದು ಹಿಮಾಚಲದಲ್ಲಿನ ಚಂಡಿಕಾ ದೇವಿಯನ್ನು ಕುರಿತು ಹೇಳಿದಳು.

''ದೇವಿ ! ಯುದ್ಧಯಜ್ಞದಲ್ಲಿ ಬಲಿಕೊಟ್ಟ ಈ ಚಂಡ ಮುಂಡರೆಂಬ ಈ ಮಹಾ ಪಶುಗಳನ್ನು ನಿನ್ನ ಬಳಿಗೆ ತಂದಿರುತ್ತೇನೆ ನೀನು ಮುಂದೆ ಶುಂಭ-ನಿಶುಂಭರನ್ನು ಸಂಹರಿಸು''. ಈ ವಾಕ್ಯಗಳನ್ನು ಕೇಳಿದ ಅಂಬಿಕೆ

"ಕಾಳಿಕೆ ! ನೀನು ಚಂಡ-ಮುಂಡರನ್ನು ಈ ರೀತಿ ಹಿಡಿದು ನನ್ನ ಬಳಿಗೆ ಬಂದುದರಿಂದ ಇನ್ನು ಮುಂದೆ ನೀನು ಲೋಕದಲ್ಲಿ "ಚಾಮುಂಡಾ" ಎಂದು ಪ್ರಖ್ಯಾತಿಯನ್ನು ಹೊಂದುವಿ"..

ವೀರಾಗ್ರಣಿಗಳಾದ ಚಂಡ ಮುಂಡರು, ಹಾಗೂ ಅವರ ಸೈನ್ಯವೆಲ್ಲವೂ ನಷ್ಟವಾಯಿತೆಂದು ಕೇಳಿದ ಶುಂಭನು, ತನ್ನ ವಿಶಿಷ್ಟವಾದ ಸೇನೆಯನ್ನು ಯುದ್ಧಕ್ಕೆ ಕಳುಹಿಸುವುದಾಗಿ ನಿಶ್ಚಯಿಸಿದನು. ಕಾಲಕ, ದೌರ್ಹೃದ, ಮೌರ್ಯ, ಕಾಲಿಕೇಯ ಮೊದಲಾದ ಭಿನ್ನಭಿನ್ನ ವಂಶದ ರಾಕ್ಷಸರನ್ನು ಸಂಗ್ರಾಮಕ್ಕೆ ಸಜ್ಜುಗೊಳಿಸಿದನು. ಅತಿಭಯಂಕರವಾದ ಸೈನ್ಯವು ಯುದ್ಧಕ್ಕೆ ಬರುತ್ತಿರುವುದನ್ನು ಕಂಡು ದೇವಿ ಒಮ್ಮೆ ಧನುಷ್ಟೇಂಕಾರ ಮಾಡಿದಳು. ದೇವಿಯ ವಾಹನವಾದ ಸಿಂಹವು ಎದೆ ಬಿರಿಯುವಂತೆ ಗರ್ಜಿಸತೊಡಗಿತು. ಈ ಧ್ವನಿಯ ಜೊತೆಗೆ ಘಂಟಾನಾದವನ್ನು ಮಾಡುತ್ತ ಕಾಳಿಕಾದೇವಿಯು ಬಾಯಿ ತೆರೆದು ಭೀಕರವಾದ ಧ್ವನಿಯನ್ನು ಮಾಡುತ್ತ ನಿಂತಳು ಈ ಮಧ್ಯೆ ದೈತ್ಯರ ನಾಶಕ್ಕಾಗಿಯೂ, ದೇವತೆಗಳ ಸ್ಥಿತಿಗಾಗಿಯೂ, ಬ್ರಹ್ಮ-ಶಿವ-ಸ್ಕಂದ-ವಿಷ್ಣು-ಇಂದ್ರ ಇತ್ಯಾದಿಗಳ ಶಕ್ತಿಗಳು ಅವರವರ ದೇಹದಿಂದ ಹೊಮ್ಮಿ, ಆಯಾಯ ರೂಪದಿಂದಲೇ ಚಂಡಿಕೆಯನ್ನು ಸೇರಿದವು. ಇವುಗಳೇ ಬ್ರಾಹ್ಮೀ, ಮಾಹೇಶ್ವರೀ ಕೌಮಾರೀ, ವೈಷ್ಣವಿ, ಇಂದ್ರಾಣೀ ಇತ್ಯಾದಿ ಹೆಸರುಗಳನ್ನು ಪಡೆದವು. ಅನಂತರ ದೇವಿಯ ಶರೀರದಿಂದ ಅತ್ಯುಗ್ರಳೂ, ಅತಿಭಯಂಕರಳೂ ಆದ, ನೂರಾರು ನರಿಗಳಂತೆ ಊಳಿಡುವ ಚಂಡಿಕಾ ಶಕ್ತಿಯೊಂದು ಹೊರ ಹೊಮ್ಮಿತು. ಅಪರಾಜಿತಳಾದ ಆಕೆ ಈಶ್ವರ ಶಕ್ತಿಯನ್ನು ಕುರಿತು "ಎಲೈ ದೇವನೇ ! ನೀನು ದೂತನಂತೆ ಶುಂಭ ನಿಶುಂಭರಲ್ಲಿಗೆ ಹೋಗಿ ನಿಮಗೆ ಬದುಕುವ ಆಸೆಯಿದ್ದರೆ ಪಾತಾಳಕ್ಕೆ ಹೋಗಿ ನೆಲಸಿ" ಎಂದೂ ಇಲ್ಲವೇ ಯುದ್ಧವನ್ನೇ ಅಪೇಕ್ಷಿಸುವುದಾದರೆ, ಇಲ್ಲಿಯ ರಣರಂಗಕ್ಕೆ ಬನ್ನಿರಿ ಎಂದು ತಿಳಿಸು" ಎಂದು ನುಡಿದಳು. ದೇವಿಯಿಂದಲೇ ಸ್ವಯಂ ದೂತಳಾಗಿ ನಿಯುಕ್ತಳಾದ ಶಿವಶಕ್ತಿ 'ಶಿವದೂತಿ' ಎಂದೇ ಪ್ರಸಿದ್ಧಳಾದಳು.

ಅಂಬಿಕೆಯ ಈ ಮಾತನ್ನು ಕೇಳುತ್ತಿದ್ದ ದೈತ್ಯರು ದೇವಿಯ ಸೈನ್ಯದ ಮೇಲೆ ನಾನಾವಿಧವಾದ ಶಸ್ತ್ರಗಳನ್ನು ಪ್ರಯೋಗಿಸಲಾರಂಭಿಸಿದರು. ಬ್ರಹ್ಮಾಣೀ, ವೈಷ್ಣವೀ, ಮೊದಲಾದ ದೇವಶಕ್ತಿಗಳು ಈ ರಾಕ್ಷಸರನ್ನು

ಬಹುವಾಗಿ ಎದುರಿಸಿ ಅವರೆಲ್ಲರ ಸಾಹಸವನ್ನು ಅಡಗಿಸಿದರು. ಹೀಗೆ ಮಾತೃಗಣವು ಮಹಾಸುರರನ್ನು ಬೇರೆಬೇರೆಯ ಉಪಾಯದಿಂದ ಮರ್ದಿಸುತ್ತಿರುವುದನ್ನು ಕಂಡು ಉಳಿದ ರಾಕ್ಷಸ ಸೈನಿಕರು ದಿಕ್ಕಾಪಾಲಾಗಿ ಓಡಲಾರಂಭಿಸಿದರು. ಇದನ್ನು ಕಂಡ 'ರಕ್ತ-ಬೀಜ' ನೆಂಬ ಮಹಾಸುರನು ಯುದ್ಧಮಾಡಲು ಮುಂದೆ ಬಂದನು. ಇವನ ಶರೀರದಿಂದ ಭೂಮಿಯಲ್ಲಿ ಬಿದ್ದ ಒಂದೊಂದು ರಕ್ತದ ಬಿಂದುವೂ ಅವನಷ್ಟೇ ಬಲಶಾಲಿಯಾದ ಮಹಾಸುರನನ್ನು ಸೃಷ್ಟಿಸುತ್ತಿತ್ತು. ಮೊಟ್ಟಮೊದಲು ಈ ದೈತ್ಯನು 'ಇಂದ್ರಾಣಿ'ಯ ಮೇಲೆ ಬಿದ್ದನು. ಆ ಮಾತೃದೇವಿಯು ವಜ್ರಾಯುಧವನ್ನು ಈತನ ಮೇಲೆ ಪ್ರಯೋಗಿಸಿದಳು. ಆತನ ದೇಹದಿಂದ ರಕ್ತ ಹರಿದು, ದೈತ್ಯರು ಅದರಿಂದ ಮೇಲೆ ಬಿದ್ದರು ಉಳಿದ ಮಾತೃಕೆಯರೆಲ್ಲರೂ ಈತನನ್ನು ತಮ್ಮತಮ್ಮ ಆಯುಧಗಳಿಂದ ಎದುರಿಸಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ರಕ್ತಬೀಜಾಸುರನ ರಕ್ತದಿಂದ ಜನಿಸಿದ ರಾಕ್ಷಸರಿಂದ ಯುದ್ಧ ಭೂಮಿಯೆಲ್ಲವೂ ತುಂಬಿ ಹೋಯಿತು. ದೇವತೆಗಳು ಗಾಬರಿಗೊಂಡರು ಹೀಗೆ ಗಾಬರಿಗೊಂಡ ದೇವತೆಗಳನ್ನು ನೋಡಿ ಚಂಡಿಕೆಯು ಕಾಳಿಕೆಯನ್ನು ಕುರಿತು "ಹೇ ಕಾಲಿಕೆ ! ನಿನ್ನ ಬಾಯನ್ನು ವಿಸ್ತರಿಸಿ, ರಣಭೂಮಿಯಲ್ಲಿ ಸಂಚರಿಸುತ್ತ ದೈತ್ಯನ ಶರೀರದ ರಕ್ತಬಿಂದುವೊಂದೂ ನೆಲಕ್ಕೆ ಬೀಳದಂತೆ ಹೀರಿಬಿಡು' ಎಂದು ಆಜ್ಞಾಪಿಸಿದಳು. ರಕ್ತಬೀಜನ ರಕ್ತವನ್ನು ಕಾಳೀದೇವಿ ನುಂಗಿದಳು. ಕಟ್ಟಕಡೆಯಲ್ಲಿ ರಕ್ತಹೀನನಾದ ರಕ್ತಬೀಜನು ನೆಲಕ್ಕೆ ಉರುಳಿದನು. ದೇವತೆಗಳೆಲ್ಲರೂ ಸಂತಸದಿಂದ ನಲಿದರು. ಮಾತೃಗಣದ ದೇವಿಯರು ರಕ್ತಮದದಿಂದ ಉಬ್ಬಿ ಕುಣಿದಾಡಿದರು.

ತನ್ನ ವಿಶಾಲವಾದ ಸೈನ್ಯವೆಲ್ಲವೂ ನಾಶವಾಗುತ್ತಿರುವುದನ್ನು ಕಂಡ ಶುಂಭ ನಿಶುಂಭರು ಕೋಪಾತಿಶಯದಿಂದ ದೇವಿಯನ್ನು ಎದುರಿಸಲು ಯುದ್ಧರಂಗವನ್ನು ಪ್ರವೇಶಿಸಿದರು. ಭಯಂಕರವಾದ ಯುದ್ಧ ಆರಂಭವಾಯಿತು. ಶಸ್ತ್ರಪ್ರತಿಶಸ್ತ್ರದಿಂದ ಸೈನ್ಯಾಧಿಪತಿಗಳೂ, ದೇವಿಯೂ ಒಬ್ಬರನೊಬ್ಬರು ಸಮನಾಗಿ ಎದುರಿಸಿದರು. ನಿಶುಂಭಾಸುರನು ಹರಿತವಾದ ಹಾಗೂ ಹೊಳೆಯುತ್ತಿರುವ ಖಡ್ಗವನ್ನೂ ಗುರಾಣಿಯನ್ನೂ ತೆಗೆದುಕೊಂಡು ದೇವಿಯ ವಾಹನವಾದ ಸಿಂಹದ ತಲೆಗೆ ಹೊಡೆದನು. ಆಗ ದೇವಿಯು ತನ್ನ 'ಕ್ಷುರಪ್ರ' ಎಂಬ ಆಯುಧ

ದಿಂದ ನಿಶುಂಭನ ಕತ್ತಿಯನ್ನು, ಗುರಾಣಿಯನ್ನೂ ತುಂಡರಿಸಿದಳು. ನಿಶುಂಭನು ಪ್ರಯೋಗಿಸಿದ ಶಕ್ತಿ, ಶೂಲ, ಗದೆ ಇವೆಲ್ಲವೂ ಅಂಬಿಕೆಯ ತ್ರಿಶೂಲದಿಂದ ಕತ್ತರಿಸಲ್ಪಟ್ಟವು. ಕೊನೆಯಲ್ಲಿ ನಿಶುಂಭನು ದೇವಿಯ ಶರಾಘಾತಕ್ಕೆ ಬಲಿಯಾಗಿ ಎಚ್ಚರತಪ್ಪಿ ಉರುಳಿದನು. ಇದರಿಂದ ಕ್ರುದ್ಧನಾದ ಶುಂಭನು ದೇವಿಯನ್ನು ಎದುರಿಸಲು ಮುಂದೆ ನುಗ್ಗಿ ಬಂದನು.

ಶುಂಭನ ಸಿಂಹನಾದದಿಂದ ಮೂರು ಲೋಕವೂ ತುಂಬಿತು. ಆದರೆ ದೇವಿಯ ಭಯಂಕರವಾದ ಸಿಡಿಲಿನಂತಹ ಧ್ವನಿ ಅದನ್ನು ಮುಳುಗಿಸಿತು. ಸಾವಿರಾರು ಬಾಣಗಳಿಂದ ಇಬ್ಬರೂ ಘೋರವಾದ ಸಂಗ್ರಾಮವನ್ನು ನಡೆಯಿಸಿದರು. ಶುಂಭನು ಪ್ರಯೋಗಿಸಿದ ಯಾವತ್ತೂ ಆಯುಧಗಳು ವ್ಯರ್ಥವಾದಾಗ ಸಾವಿರಾರು ತೋಳುಗಳನ್ನು ಹೊಂದಿ ಮಾಯೆಯಿಂದ ಚಕ್ರಾಯುಧ ಸಹಿತವಾಗಿ ದೇವಿಯ ಮೇಲೆ ನುಗ್ಗಿದನು. ಈ ವೇಳೆಗೆ ನಿಶುಂಭನು ಎಚ್ಚರ ಹೊಂದಿ ಪುನಃ ಯುದ್ಧಕ್ಕೆ ಸಿದ್ಧನಾದನು. ಸಾವಿರಾರು ತೋಳುಗಳನ್ನು ಹೊಂದಿ ಮಾಯಾ ಯುದ್ಧಕ್ಕೆ ತೊಡಗಿದ ಆ ನಿಶುಂಭನ ಆಟವೇನೂ ನಡೆಯಲಾರದೆಹೋಯಿತು. ಕಟ್ಟಕಡೆಯಲ್ಲಿ ದೇವಿಯು ಲೋಕ ಕಂಟಕನಾದ ಹಾಗೂ ಶೂಲವನ್ನು ಧರಿಸಿ ಮುಂದುವರಿಯುತ್ತಿರುವ ನಿಶುಂಭನನ್ನು ತ್ರಿಶೂಲದಿಂದ ಎದೆಯಲ್ಲಿ ಇರಿದಳು. ಇರಿಯಲ್ಪಟ್ಟ ಅವನ ಎದೆಯಿಂದ ಮತ್ತೊಬ್ಬ ರಾಕ್ಷಸನು ಮೇಲಿದ್ದಾಗ ಚಂಡಿಕೆ ಅವನನ್ನೂ ಇರಿದಳು. ಆತನು ನೆಲಕ್ಕೆ ಬಿದ್ದನು. ವಾಹನವಾದ ಸಿಂಹವು ತನ್ನ ಕೋರೆದಾಡೆಗಳಿಂದ ದೈತ್ಯರ ಕತ್ತುಗಳನ್ನು ಕಡಿದು ತಿನ್ನಲಾರಂಭಿಸಿತು. ಹೀಗೆಯೇ ನಿಶುಂಭನೂ, ದೈತ್ಯರೆಲ್ಲರೂ ಚಂಡಿಕೆ, ಕಾಳಿ, ಶಿವದೂತಿ, ಐಂದ್ರಿ ಇತ್ಯಾದಿ ಮಾತೃಕೆಯರಿಗೆ ಬಲಿಯಾದರು.

ತನ್ನ ಪ್ರಾಣಪ್ರಿಯನಾದ ನಿಶುಂಭನ ದೇವಿಗೆ ಆಹುತಿಯಾದುದನ್ನು ಕಂಡ ಶುಂಭಾಸುರ ಕೋಪೋದ್ರಿಕ್ತನಾಗಿ ದೇವಿಯ ಮುಂದೆ ನಿಂತು "ಎಲೈ ! ಬಲದಿಂದ ಅಹಂಕಾರ ಪಡುತ್ತಿರುವ ದುರ್ಗೆ ! ನಿನ್ನ ಗರ್ವವನ್ನು ಬಿಡು. ನೀನು ಮಾಡುತ್ತಿರುವುದು ಏಕಾಂಗಿನಿಯ ಯುದ್ಧವಲ್ಲ ಇತರರ ಬಲವನ್ನು ಆಶ್ರಯಿಸಿದ್ದೀಯೇ! ಇದು ನಿನಗೆ ಯುಕ್ತವಲ್ಲ. ನಿನ್ನಲ್ಲಿ ಸಾಮರ್ಥ್ಯವಿದ್ದರೆ ನೀನೊಬ್ಬಳೇ ನನ್ನೊಡನೆ ಕಾದಾಡಲು ಬಾ'' ಎಂದು ಕರೆಗೊಟ್ಟನು.

"ಅಯ್ಯಾ ! ದುಷ್ಟ ! ನೀನು ತಿಳಿದಿರುವುದು ತಪ್ಪು, ನಾನೊಬ್ಬಳೇ ಈ ಚರಾಚರ ಜಗತ್ತನ್ನು ವ್ಯಾಪಿಸಿದವಳು. ನನಗೆ ಎರಡನೆಯವರು ಯಾರೂ ಇಲ್ಲ'. ಎಂದು ದೈತ್ಯನಿಗೆ ಉತ್ತರಿಸುತ್ತಿದ್ದಂತೆಯೆ 'ಬ್ರಹ್ಮಾಣಿ' ಮೊದಲಾದ ಸಮಸ್ತ ಮಾತೃದೇವತೆಯರು ದೇವಿಯ ಶರೀರದಲ್ಲಿ ಐಕ್ಯವಾದರು. ಆಗ ಅಂಬಿಕೆಯೊಬ್ಬಳೇ ಉಳಿದಳು. ಎಲ್ಲ ದೇವತೆಗಳು, ದೈತರೂ ನೋಡುತ್ತಿದ್ದಂತೆಯೇ ಇಬ್ಬರಿಗೂ ಘೋರವಾದ ಯುದ್ಧ ಆರಂಭವಾಯಿತು. ಬಹಳ ಹೊತ್ತು ಇವರೀರ್ವರೂ ಅಸ್ತ್ರ–ಪ್ರತ್ಯಸ್ತ್ರ, ಶಸ್ತ್ರ-ಪ್ರತಿಶಸ್ತ್ರಗಳಿಂದ ಕಾದಾಡಿದರು. ಕಟ್ಟಕಡೆಯಲ್ಲಿ ಚಂಡಿಕೆಯು ನುಗ್ಗಿ ಬರುತ್ತಿದ್ದ ರಾಕ್ಷಸಾಧಿಪತಿಯಾದ ಶುಂಭನ ಎದೆಯನ್ನು ಶೂಲದಿಂದ ತಿವಿದಳು. ಭೂಮಂಡಲವನ್ನೇ ಅಲ್ಲಾಡಿಸುವ ರೀತಿಯಲ್ಲಿ ಆತ ನೆಲಕ್ಕೆ ಉರುಳಿದನು. ಈತನ ಮರಣದಿಂದ ಜಗತ್ತಿನಲ್ಲಿ ಶಾಂತಿ ನೆಲಸಿತು. ಆಕಾಶ ನಿರ್ಮಲವಾಯಿತು. ಎಲ್ಲೆಲ್ಲಿಯೂ ಸ್ವಾಸ್ಥ್ಯ ಉಂಟಾಯಿತು. ಪುಣ್ಯಮಯವಾದ ಗಾಳಿ ಬೀಸಲಾರಂಭಿಸಿತು. ಸೂರ್ಯನು ಹೆಚ್ಚು ಪ್ರಕಾಶದಿಂದ ಬೆಳಗಿದನು. ದೇವತೆಗಳು ನಲಿದರು. ಗಂಧರ್ವರು ಹಾಡಿ ಸಂತೋಷಪಟ್ಟರು.

ಇಂದ್ರನನ್ನು ಮುಂದಿಟ್ಟುಕೊಂಡ ದೇವತೆಗಳು ದೇವಿಯನ್ನು ಸ್ತುತಿಸಲು ಆರಂಭಿಸಿದರು.

"ದೇವಿ ! ಪ್ರಸನ್ನಳಾಗು, ನಿಖಿಲ ವಿಶ್ವಜನನೀ. ನೀನು ಚರಾಚರ ಜಗತ್ತಿನ ಸಂರಕ್ಷಕಿ, ಆದುದರಿಂದ ನಮ್ಮೆಲ್ಲರನ್ನೂ ಸಂರಕ್ಷಿಸು. ನೀನು ಪಂಚ ಭೂತಾತ್ಮಿಕೆ. ಹೇ ನಾರಾಯಣೀ ! ಸರ್ವಮಂಗಳಗಳ ಮಾಂಗಲ್ಯ ಸ್ವರೂಪಿಣಿ ! ನಿನಗೆ ಶರಣು ; ಸೃಷ್ಟಿ-ಸ್ಥಿತಿ-ಲಯ ಕರ್ತ್ರಿಯಾದ ನಿನಗೆ ನಮೋ ನಮಃ. ನೀನು ಯಾವಾಗಲೂ ಶರಣಾಗತರು, ದೀನರು, ಆರ್ತರು ಇವರುಗಳ ರಕ್ಷಣೆಯಲ್ಲಿ ನಿರತಳಾಗಿರುವವಳು. ಬ್ರಹ್ಮಾಣಿ. ಮಾಹೇಶ್ವರೀ ಕೌಮಾರಿ-ಇಂದ್ರಾಣಿ-ವೈಷ್ಣವಿ ಇತ್ಯಾದಿ ಸಪ್ತಮಾತೃಕಾ ಸ್ವರೂಪಿಣಿಯೂ ನೀನೇ. ಸರ್ವರೂಪಳೇ ! ಸರ್ವೇಶ್ವರಿಯೇ ! ಸರ್ವಶಕ್ತಿಯುತಳೇ ! ದುರ್ಗಾ ದೇವಿಯೇ ನಮ್ಮನ್ನು ಸರ್ವಭಯಗಳಿಂದಲೂ ಕಾಪಾಡು. ನಿನ್ನ ಅಯುಧಗಳು ನಮ್ಮೆಲ್ಲರನ್ನೂ ಸರ್ವದಾ ಸಂರಕ್ಷಿಸಲಿ.

ದೇವತೆಗಳ ಭಕ್ತಿಪೂರ್ಣವಾದ ಈ ಸ್ತುತಿಯಿಂದ ಸಂತುಷ್ಟಳಾದ ದೇವಿಯು, "ಎಲೈ ದೇವತೆಗಳಿರಾ, ಜಗತ್ತಿಗೆ ಕಲ್ಯಾಣವನ್ನು ಉಂಟು ಮಾಡುವ ಯಾವ ವರವನ್ನಾದರೂ ಬೇಡಿಕೊಳ್ಳಿ" ಎಂದು ಹೇಳಿದಳು.

ತ್ರಿಲೋಕೇಶ್ವರಿ! ನಮ್ಮ ಬೇಡಿಕೆ ಇಷ್ಟು. ಇನ್ನು ಮುಂದೆಯೂ, ಬರಬಹುದಾದ ವೈರಿಗಳ ಬಾಧೆಯಿಂದ ನಮ್ಮನ್ನು ಮುಕ್ತಿಗೊಳಿಸು ಎಂದು ಪ್ರಾರ್ಥಿಸಿದರು.

ಈ ಪ್ರಾರ್ಥನೆಯನ್ನು ಆಲಿಸಿದ ಅಂಬಿಕೆ "ಅಯ್ಯಾ ದೇವತೆಗಳಿರಾ, ಇನ್ನೊಮ್ಮೆ ಇಪ್ಪತ್ತೆಂಟನೆಯ ಯುಗದಲ್ಲಿ ವೈವಸ್ವತ ಮನ್ವಂತರವು ಪ್ರಾಪ್ತವಾದಾಗ ಶುಂಭ-ನಿಶುಂಭರೆಂಬ ರಕ್ಕಸರು ಜನಿಸುವರು. ಆಗ ನಾನು ವಿಂಧ್ಯವಾಸಿನಿಯಾಗಿ ಅವರನ್ನು ಸಂಹರಿಸುವೆನು. ಮತ್ತೊಮ್ಮೆ ವೈಪ್ರಚಿತ್ತರೆಂಬ ರಾಕ್ಷಸರನ್ನು ಕೊಲ್ಲುವೆನು. ಆಗ ಅವರ ರಕ್ತಪಾನ ಮಾಡಿದ ನಾನು "ರಕ್ತ-ದಂತಿಕಾ" ಎಂಬ ಹೆಸರನ್ನು ಪಡೆಯುವೆನು. ಇನ್ನೊಮ್ಮೆ 'ಶತಾಕ್ಷಿ' ಯಾಗಿ, ಶಾಕಂಭರಿಯಾಗಿ, ಅನಾವೃಷ್ಟಿಯಿಂದ ಪೀಡಿತವಾದ ಜಗತ್ತನ್ನು ಸಂರಕ್ಷಿಸುವೆನು. "ದುರ್ಗಮ" ನೆಂಬ ರಾಕ್ಷಸನು ಆಗ ನನ್ನಿಂದ ಕೊಲ್ಲಲ್ಪಡುವನು. ಭೀಮಾದೇವಿಯೆಂಬ ಹೆಸರಿನಿಂದ ಮತ್ತೊಮ್ಮೆ ಹಿಮಾಚಲದ ಋಷಿಮುನಿಗಳಿಗೆ ಬಾಧಕರಾದ ರಾಕ್ಷಸರನ್ನು ಸಂಹರಿಸುವೆನು. ಮುಂದೆ 'ಅರುಣ'ನೆಂಬ ದೈತ್ಯ ನಾಶಕ್ಕಾಗಿ ದುಂಬಿಯ ರೂಪವನ್ನು ತಾಳುವೆನು. ಆಗ ದುಂಬಿಯ ಸೈನ್ಯವೇ ನನಗೆ ಸಹಾಯವಾಗುವುದು. ಅಂದಿನ ನಾನು "ಭ್ರಾಮರೀ" ಎಂದು ಪ್ರಸಿದ್ಧಳಾಗುವೆನು.

ಹೀಗೆ ದೇವತೆಗಳಿಗೆ ಅಭಯ ಪ್ರದಾನ ಮಾಡಿ, ತನ್ನ ಪ್ರಕೃತದ ಅವತಾರವಾದ ಮಹಾಕಾಳೀ-ಮಹಾಲಕ್ಷ್ಮೀ - ಮಹಾಸರಸ್ವತಿಯರ ಚರಿತೆಯನ್ನು ಶ್ರದ್ಧೆಯಿಂದ ಕೇಳುವ, ಹಾಗೂ ಪಠಿಸುವ ವ್ಯಕ್ತಿಗಳಿಗೆ ಸಕಲ ಇಷ್ಟಾರ್ಥ ಸಾಧನೆಯೂ, ಸಕಲ ಬಾಧಾ ಪರಿಹಾರವೂ ಆಗುವುದೆಂದು ಹೇಳಿ, ದೇವಿಯು ಎಲ್ಲ ದೇವತೆಗಳೂ ನೋಡುತ್ತಿದಂತೆ ಅದೃಶ್ಯಳಾದಳು.

ತಮ್ಮ ನಿತ್ಯ ಶತ್ರುಗಳಾದ ರಾಕ್ಷಸರ ಸಂಹಾರದಿಂದ, ನಿರಾತಂಕರಾದ ದೇವೇಂದ್ರಾದಿಗಳು ತಮ್ಮ ತಮ್ಮ ಪದವಿಗಳನ್ನು ವಹಿಸಿಕೊಂಡರು.

ಯಜ್ಞಯಾಗಾದಿಗಳಿಂದ ಅವರಿಗೆ ಸಲ್ಲಬೇಕಾದ ಹವಿಸ್ಸುಗಳು ಯಥಾವತ್ತು ಲಭಿಸಲಾರಂಭಿಸಿದವು'.

ಸುಮೇಧ ಋಷಿಯು ಮಾತಿನಿಂದ ಸಮಾಧಾನಗೊಂಡ ಸುರಥ ಮಹಾರಾಜನು ಆ ಋಷಿಗೆ ನಮಸ್ಕರಿಸಿ, ಆತನ ಅಪ್ಪಣೆಯನ್ನು ಪಡೆದು ತಪಸ್ಸಿಗೆ ತೆರಳಿದನು. ಆ ಸಮಾಧಿಯೆಂಬ ವೈಶ್ಯನೂ ಅಂಬಿಕೆಯನ್ನು ಪ್ರತ್ಯಕ್ಷದರ್ಶನೇಚ್ಛೆಯಿಂದ ನದಿಯ ದಡದಲ್ಲಿ ನಿಂತನು. ಇವರಿಬ್ಬರ ಕಠಿಣವಾದ ಉಪಾಸನೆಯಿಂದ, ದೇವಿ ಪ್ರತ್ಯಕ್ಷಳಾದಳು. ರಾಜನ ಇಷ್ಟದಂತೆ, ತನ್ನ ಶತ್ರುಗಳನ್ನು ಸಂಹಾರ ಮಾಡುವ ಶಕ್ತಿಯನ್ನು ಪಡೆದು, ಅವರೆಲ್ಲರನ್ನೂ ನಿಗ್ರಹಿಸಿದನು. ಕಳೆದು ಹೋದ ರಾಜ್ಯ ಕೈ ಸೇರಿತು. ನಂತರ ಮುಂದಿನ ಜನ್ಮದಲ್ಲಿ ‘‘ಸಾವರ್ಣಿಕ ಮನು” ವಾಗಿ ಜನಿಸಿದನು. ವಿವೇಕಿಯಾದ ವೈಶ್ಯನೂ ಕೂಡ ವೈರಾಗ್ಯಯುಕ್ತವಾದ ಮನಸ್ಸುಳ್ಳವನಾಗಿ ‘ನಾನು’ ‘ನನ್ನದು’ ಎಂಬ ದುರಭಿಮಾನವನ್ನು ಬಿಟ್ಟು ತತ್ತ್ವಜ್ಞಾನ ಸಂಪನ್ನನಾದನು.

ಸಂಪೂರ್ಣಂ

।।ಶ್ರೀಕೃಷ್ಣಾರ್ಪಣಮಸ್ತು।।



ರಾಜ್‌ಕಮಲ್ ಪ್ರೆಸ್, ಅರಳೇಪೇಟೆ, ಬೆಂಗಳೂರು-53

ಬೆಲೆ 2-00